ವಜ್ರಮಹೋತ್ಸವದ ಸವಿನೆನಪಿನ ಪುಷ್ಪಮಾಲಿಕೆ - 7

ಶ್ರೀ ವಾಲಿವಧ ಪ್ರಸಂಗ

ಲೇ|| ವಿದ್ವಾನ್ ಎನ್. ರಂಗನಾಥ ಶರ್ಮ

ಪ್ರಕಾಶಕರು :
ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್
ಶ್ರೀರಾಮಮಂದಿರ, ನರಸಿಂಹರಾಜ ಕಾಲೋನಿ, ಬೆಂಗಳೂರು - 560 019 ದೂರವಾಣಿ : 620231

ವಜ್ರಮಹೋತ್ಸವದ ಸವಿನೆನಪಿನ ಪುಷ್ಪಮಾಲಿಕೆ - 7

ಶ್ರೀ ವಾಲಿವಧ ಪ್ರಸಂಗ

ಧರ್ಮನಿಷ್ಠೆ

ಲೇಖಕರು :

ವಿದ್ವಾನ್ ಎನ್. ರಂಗನಾಥ ಶರ್ಮಾ

ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್

ಶ್ರೀರಾಮಮಂದಿರ

ನರಸಿಂಹರಾಜ ಕಾಲೋನಿ, ಬೆಂಗಳೂರು - 560 019

ದೂರವಾಣಿ : 620 231

SRI VALIVADHA PRASANGA - DHARAMANISTE : Written by Vidwan Ranganatha Sharma, Janaki Krupa, Vijayanagar, Bangalore - 41 & Published by the Vajra Mahotsava Committee, Sri Narasimharaja Colony Association, Sri Rama Mandira, Narasimharaja Colony, Bangalore - 19.

First Edition : 1998

@ Reserved

Price : Rs. 10/-

Printed at :
ādithya Printers
29, 1st 'B' Main Road, Lalbagh Road
Sudhamanagara, Bangalore - 560 027
Ph. : 22 75 712.

ನಿವೇದನೆ

ನಮ್ಮ ಅಸೋಸಿಯೇಷನವರು 59 ವರ್ಷಗಳ ಹಿಂದೆ ಆಸ್ತಿಕ ಜನತೆಯಲ್ಲಿ ಆಸಕ್ತಿ ಹೆಚ್ಚಿಸುವ ಉದ್ದೇಶದಿಂದ ಶ್ರೀರಾಮೋತ್ಸವ ಆಚರಣೆಯನ್ನು ಪ್ರಾರಂಭಿಸಿದೆವು. ವರ್ಷೇ ವರ್ಷೇ ಜನರು ನಮ್ಮ ಕಾರ್ಯಕ್ರಮಗಳಲ್ಲಿ ಹೆಚ್ಚು - ಹೆಚ್ಚು ಆಸಕ್ತಿ ತಳೆಯುತ್ತ ನಮ್ಮ ಉದ್ದೇಶಕ್ಕೆ ಉತ್ತಮ ಪ್ರತಿಕ್ರಿಯೆ ದೊರೆಯಿತು. ಕಾರ್ಯಸಾಧನೆಯಲ್ಲಿ ನಮಗೆ ಹೆಚ್ಚಿನ ಹುರುಪು ಉಂಟಾಯಿತು. ಜನರ ಅನುಕೂಲಕ್ಕಾಗಿ ಅಭಿವೃದ್ಧಿ ಕಾರ್ಯಕ್ರಮ ಕೈಗೊಂಡೆವು. ಪ್ರತಿವರ್ಷದ ರಾಮೋತ್ಸವದಲ್ಲಿ ಕಲಾವಿದರಿಗೆ ಅವಕಾಶ ಕಲ್ಪಿಸುತ್ತ ಸಾವಿರಾರು ಕಲಾವಿದರಿಗೆ ಪ್ರೋತ್ಸಾಹ ನೀಡಿದೆವು. ಕನ್ನಡ ಅನುವಾದ ಸಹಿತ ಶ್ರೀ ವಾಲ್ಮೀಕಿ ರಾಮಾಯಣ - ಭಾಗವತ - ಸ್ತೋತ್ರಗಳು - ನಾಮಾವಳಿಗಳು ಮುಂತಾದ ಉಪಯುಕ್ತ ಪುಸ್ತಕಗಳನ್ನು ಪ್ರಕಟಿಸಿದೆವು. ಹಲವರು ಮಠಾಧೀಶರು - ಹಿರಿಯರನ್ನು ರಾಮೋತ್ಸವಕ್ಕೆ ಬರಮಾಡಿಕೊಂಡು ಗೌರವ ಸಲ್ಲಿಸಿದೆವು.

1964ರಲ್ಲಿ ಶ್ರೀ ರಾಮೋತ್ಸವದ ರಜತ ಮಹೋತ್ಸವ, 1988ರಲ್ಲಿ ಸುವರ್ಣ ಮಹೋತ್ಸವಗಳು ಉಪಯುಕ್ತ ರೀತಿಯಲ್ಲಿ ವೈಭವದಿಂದ ನಡೆದು ಇದೀಗ ವಜ್ರ ಮಹೋತ್ಸವದ ಸುಯೋಗ ಸನ್ನಿಹಿತವಾಗಿದೆ. ಈ ಸಂಬಂಧವಾಗಿ ಇದೇ 1997ರ ಅಕ್ಟೋಬರ್ ತಿಂಗಳಲ್ಲಿ 13 ದಿನಗಳ ಕಾಲ ವೇದ - ಪುರಾಣ ಗ್ರಂಥಗಳ ಪಾರಾಯಣ, ಹೋಮ ಹವನಗಳು, ಸಭೆ - ಉಪನ್ಯಾಸ - ವಿಚಾರಗೋಷ್ಠಿ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

1998ನೇ ಇಸವಿಯ ರಾಮೋತ್ಸವದ ಸಂದರ್ಭದಲ್ಲಿ ಈ ವಜ್ರ ಮಹೋತ್ಸವದ ಸಮಾರೋಪ ನಡೆಯಲಿದೆ.

ಈಗಾಗಲೇ ವಜ್ರ ಮಹೋತ್ಸವದ ಸಂಬಂಧವಾಗಿ 1) ಪವಮಾನ ಸೂಕ್ತಂ (ಹೋಮವಿಧಿ ಸಹಿತಂ) (2) ಭಗವನ್ನಾಮ ಪುಷ್ಪಾಂಜಲಿ (3) ಅಷ್ಟೋತ್ತರ ಶತನಾಮ ದಿವ್ಯಸ್ತೋತ್ರಾವಳಿಃ (೧೦೮ ಅಷ್ಟೋತ್ತರ ಸ್ತೋತ್ರಗಳ ಸಂಗ್ರಹ) ಈ ಪುಸ್ತಕಗಳು ಪ್ರಕಟವಾಗಿವೆ. ಇನ್ನೂ ಕೆಲವು ಪ್ರಕಟವಾಗಲಿವೆ. ಈ ಎಲ್ಲಾ ಪುಸ್ತಕಗಳ ಮಾರಾಟವಾದ ಹಣವು ವಜ್ರ ಮಹೋತ್ಸವಕ್ಕೆ ವಿನಿಯೋಗವಾಗುತ್ತದೆ. ಈ ಸಂದರ್ಭದಲ್ಲಿ ಕೆಲವು ಅಭಿವೃದ್ಧಿ ಯೋಜನೆಗಳೂ ಇವೆ. ಮಹತ್ತರವಾದ ಈ ಕಾರ್ಯಗಳೆಲ್ಲವೂ ಯಶಸ್ವಿಯಾಗಲು ತಾವೆಲ್ಲರೂ ಎಂದಿನಂತೆ ಎಲ್ಲ ವಿಧದ ಸಹಾಯ - ಸಹಕಾರಗಳನ್ನು ನೀಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ. ಎಲ್ಲರೂ ಒಡಗೂಡಿ ಈ ವಜ್ರಮಹೋತ್ಸವವು ವಜ್ರದ ಪ್ರಖರ ಪ್ರಕಾಶವನ್ನು ಬೀರಿ ಶೋಭಾಯಮಾನವಾಗುವಂತೆ ಮಾಡೋಣ!

ಶ್ರೀರಾಮಭದ್ರನ ಕರುಣೆ ಎಲ್ಲರಿಗೂ ಶ್ರೀರಕ್ಷೆಯಾಗಿರಲಿ!

ಎಸ್. ಎನ್. ಮೂರ್ತಿ
ಅಧ್ಯಕ್ಷರು

ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್

ಶ್ರೀ ರಾಮೋತ್ಸವ ವಜ್ರ ಮಹೋತ್ಸವ ಸಮಿತಿ

ಗೌರವಾಧ್ಯಕ್ಷ
ಶ್ರೀ ಬಿ. ಕೆ. ಅನಂತರಾಮಯ್ಯ
ಟ್ರಸ್ಟ್ ಅಧ್ಯಕ್ಷರು

ಕಾರ್ಯಾಧ್ಯಕ್ಷ
ಶ್ರೀ ಎಸ್. ಎನ್. ಮೂರ್ತಿ
ಟ್ರಸ್ಟ್ ಕಾರ್ಯದರ್ಶಿ

ಪ್ರಧಾನ ಕಾರ್ಯದರ್ಶಿ
ಶ್ರೀ ಕೆ. ಎನ್. ವೆಂಕಟನಾರಾಯಣ
ಅಸೋಸಿಯೇಷನ್ ಕಾರ್ಯದರ್ಶಿ ಮತ್ತು ಟ್ರಸ್ಟಿ

ಖಜಾಂಚಿ
ಶ್ರೀ ಎ. ಎಸ್. ನಂಜುಂಡರಾವ್

ಉಪಾಧ್ಯಕ್ಷರುಗಳು

ಶ್ರೀ ಅನಂತಕುಮಾರ್
ಸಂಸತ್ ಸದಸ್ಯರು

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ
ಶಾಸಕರು

ಶ್ರೀ ಸಿ. ವಿ. ಎಲ್. ಶಾಸ್ತ್ರಿ
ಕೈಗಾರಿಕೋದ್ಯಮಿ

ಶ್ರೀ ಸಿ. ವಿ. ನಾಗೇಶ್
ಖ್ಯಾತ ವಕೀಲರು

ಶ್ರೀ ಟಿ. ವಿ. ದ್ವಾರಕಾನಾಥ್
'ಪ್ರಭಾತ್' ಅಧ್ಯಕ್ಷರು

ಶ್ರೀ ಬಿ. ಎಸ್. ನಂಜಪ್ಪ
ಇಂಜಿನಿಯರ್

ಶ್ರೀ ಡಿ. ಬಿ. ನಾರಾಯಣರಾವ್
ಅಸೋಸಿಯೇಷನ್ ಉಪಾಧ್ಯಕ್ಷರು

ಶ್ರೀಮತಿ ಹೇಮಾ ರಮೇಶ್
ಚಿತ್ರ ನಿರ್ಮಾಪಕರು

ಸಂಚಾಲಕರು

ಶ್ರೀ ಪಿ. ಎ. ಮಾಧವರಾವ್
ಶ್ರೀ ಹೆಚ್. ಎಸ್. ಶಿವಶಂಕರ್
ಶ್ರೀ ಬಿ. ಎ. ದಿನೇಶ್ ಕುಮಾರ್
ಶ್ರೀ ಬಿ. ಎಸ್. ಸತ್ಯನಾರಾಯಣ
ಶ್ರೀ ವೈ. ಎನ್. ವಾಮನಭಟ್
ಶ್ರೀ ವೈ. ಎನ್. ಕೃಷ್ಣಭಟ್
ಶ್ರೀ ಎಂ. ಎಸ್. ನಾಗರಾಜ
ಶ್ರೀ ಎ. ಆರ್. ಆಚಾರ್ಯ

ಮೊದಲ ಮಾತು

ಶ್ರೀಮದ್ರಾಮಾಯಣದಲ್ಲಿ ಲೋಕೋತ್ತರವಾದ ಗುಣಗರಿಮೆಯಿಂದ ವಿಖ್ಯಾತನಾದ ಮಹಾಪುರುಷನು ಶ್ರೀರಾಮ. ಮರ್ಯಾದಾ ಪುರುಷೋತ್ತಮನೆಂಬ ಕೀರ್ತಿಯು ಯುಕ್ತವಾಗಿಯೇ ಆತನಿಗೆ ಸಂದಿದೆ. ಸೀತಾ, ಲಕ್ಷ್ಮಣ, ಭರತ, ಹನುಮಂತ - ಮೊದಲಾದ ವ್ಯಕ್ತಿಗಳು ಪ್ರಶಂಸನೀಯ ಗುಣಾನ್ವಿತರೇ ಹೌದು. ಅವರ ಸದ್ಗುಣಗಳೆಲ್ಲವೂ ಸಾಪೇಕ್ಷವಾದವು. ರಾಜಹಂಸದಂತೆ ಗಗನದಲ್ಲಿ ಸಂಚರಿಸುವ ಪೂರ್ಣಚಂದ್ರನು ಹರ್ಷದಾಯಕವಾದ ಬೆಳದಿಂಗಳನ್ನು ಚೆಲ್ಲುತ್ತಾನೆ. ಆ ಬೆಳದಿಂಗಳು ಸೂರ್ಯರಶ್ಮಿಗಳ ಪ್ರತಿಚ್ಛಾಯೆಯಾಗಿದೆ. ಹಾಗೆಯೇ ಸೀತಾಲಕ್ಷ್ಮಣಾದಿಗಳ ಶುದ್ಧವಾದ ಹೃದಯದರ್ಪಣದಲ್ಲಿ ಶ್ರೀರಾಮನ ಮಹಾವ್ಯಕ್ತಿತ್ವವು ಪ್ರತಿಬಿಂಬಿಸಿದ್ದರಿಂದ ಬೆಳದಿಂಗಳಂತೆ ಅವರ ಸದ್ಗುಣಗಳು ಹೊರಸೂಸಿದವು. ಪರಮ ಸುಂದರನೂ ಸದ್ಗುಣಾಢ್ಯನೂ ಲೋಕೈಕ ವೀರನೂ ಆದ ಶ್ರೀರಾಮನಲ್ಲಿ ಸೀತಾದೇವಿಯ ನಿಷ್ಠೆಯು ದೃಢವಾಗಿ ನೆಲೆ ನಿಂತುದು ಸಹಜವೇ ಆಗಿದೆ. ಭರತ ಲಕ್ಷ್ಮಣರಿಗೆ ವಾತ್ಸಲ್ಯಮೂರ್ತಿಯಾದ ಅಣ್ಣನಲ್ಲಿ, ತಂದೆಯಲ್ಲಿದ್ದುದಕ್ಕಿಂತ ಅಧಿಕವಾದ ಪ್ರೀತಿಯು ಉಂಟಾದದ್ದು ವಿಸ್ಮಯಕಾರಿಯಲ್ಲ. ಶ್ರೀರಾಮನ ಪರಿಚಯವಾಗುವವರೆಗೆ ಹನುಮಂತನು ಏನಾಗಿದ್ದನು ? ವಾಲಿ ಭೀತಿಯಿಂದ ಪಲಾಯನ ಮಾಡುತ್ತಿದ್ದ ಸುಗ್ರೀವನ ಹಿಂದೆ ತಾನೂ ಓಡುತ್ತಿದ್ದ ಒಬ್ಬ ಸಾಮಾನ್ಯ ಕಪಿಯಾಗಿದ್ದನು. ಶ್ರೀರಾಮನ ದರ್ಶನವಾದ ಮೇಲೆ **'ದಾಸೋಽಹಂ ಕೋಸಲೇಂದ್ರಸ್ಯ'** ಎಂದು ತನ್ನನ್ನು ಘೋಷಿಸಿಕೊಂಡು **'ರಾಮಾಯಣ ಮಹಾಮಾಲಾರತ್ನ'**ವೇ ಆಗಿಬಿಟ್ಟನು.

ಸಕಲಸಜ್ಜನರೂ ಮೆಚ್ಚಿಕೊಂಡಾಡಿದ ಶ್ರೀರಾಮಚಂದ್ರನಲ್ಲಿಯೂ ಎತ್ತರಕ್ಕೇರಿದ ಕೆಲವು ಸಾಹಿತಿಗಳು ತಪ್ಪನ್ನು ಹುಡುಕಲು ಯತ್ನಿಸಿದ್ದಾರೆ. ಯಾವಾತನು ಸಮಸ್ತ ಸದ್ಗುಣ ಶೋಭಿತನೆಂದು ಸ್ವತಃ ನಾರದ ಮಹರ್ಷಿಗಳೇ ವಾಲ್ಮೀಕಿ ಮುನಿಗಳಿಗೆ ಹೇಳಿ ಹೊಗಳಿದ್ದರೋ, ಯಾವ ಧರ್ಮಾತ್ಮನ

ಚರಿತೆಯನ್ನು ಬರೆಯಲೇಬೇಕೆಂದು ಚತುರ್ಮುಖ ಬ್ರಹ್ಮನೇ ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಬಂದು ಪ್ರೇರಿಸಿ ಹೋಗಿದ್ದನೋ, ಯಾವಾತನ ದಿವ್ಯ ಚರಿತೆಯನ್ನು ವಾಲ್ಮೀಕಿ ಮುನಿಗಳು ಧರ್ಭಾಸನದಲ್ಲಿ ಕುಳಿತು ಧರ್ಭಪವಿತ್ರಪಾಣಿಗಳಾಗಿ ತಪೋಯೋಗದಿಂದ ರಚಿಸಿ 'ಧರ್ಮಾತ್ಮ, ಧರ್ಮಾತ್ಮ' ಎಂದು ಸಾವಿರಾರು ಸಲ ಸಾರಿ ಹೇಳಿದ್ದರೋ ಅಂತಹ ಮಹಾಪುರುಷನ ನಡತೆಯನ್ನು ಈ ಜನರು ಟೀಕಿಸಿ ನಿಂದಿಸುತ್ತಿದ್ದಾರೆ. **ಮಂಗನ ಕೈಗೆ ಮಾಣಿಕ್ಯವನ್ನು ಕೊಟ್ಟರೆ ಮೂಸಿ ನೋಡಿ ಮಣ್ಣಿಗೆಸೆದು ಮೂದಲಿಸಿತಂತೆ! ಅಂಬರಕ್ಕೇರಿ ಹದ್ದು ಹಾರುತ್ತಿದ್ದರೂ ಹೆಣದ ಮೇಲೆಯೇ ಅದರ ಕಣ್ಣು !**

ಧರ್ಮಗತಿ ಬಹುಸೂಕ್ಷ್ಮವಾದದ್ದು. ಪರಮದುರ್ವಿಜ್ಞೇಯ. ಶ್ರದ್ಧಾಭಕ್ತಿಯುತನಾಗಿ ವಿನಯದಿಂದ ಅದರ ಬಳಿಗೆ ಹೋಗಬೇಕು. ಅಹಂಕಾರದಿಂದ ದುಡುಕಿದರೆ, ರಾವಣನು ಕೈಲಾಸ ಪರ್ವತವನ್ನು ಎತ್ತಿದಂತಾದೀತು. ವಾಲಿಸಂಹಾರ, ಸೀತಾಪರಿತ್ಯಾಗ, ಶಂಬೂಕವಧೆ ಇವು ಮೂರು ಶ್ರೀರಾಮನ ಮೇಲೆ ಹುಡುಕಿ ಹೊರಿಸಿದ ಆರೋಪಗಳು. ಮೊದಲಿನದಕ್ಕೆ ಉತ್ತರ ಈ ಲೇಖನದಲ್ಲಿದೆ.

ಶ್ರೀರಾಮಮಂದಿರದ ವಜ್ರ ಮಹೋತ್ಸವದ ಸವಿನೆನಪಿಗಾಗಿ ಎಂದು ರಾಮಾಯಣದಲ್ಲಿ ಬರುವ ಕೆಲವು ಪಾತ್ರಗಳ ಬಗ್ಗೆ ಕಿರು ಪುಸ್ತಕಗಳನ್ನು ಪ್ರಕಟಿಸಲು ಆಸಕ್ತಿಯನ್ನು ತೋರುತ್ತಿರುವ ಶ್ರೀ ನರಸಿಂಹರಾಜಾ ಕಾಲೋನಿಯ ಶ್ರೀರಾಮಮಂದಿರದ ಕಾರ್ಯ ಸ್ತುತ್ಯರ್ಹವಾದುದು. ಎಂದಿನಂತೆ ಮುದ್ರಣ ದಲ್ಲಿ ಆಸಕ್ತಿ ವಹಿಸಿ ಈ ಕಿರು ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಆದಿತ್ಯ ಪ್ರಿಂಟರ್ಸ್, ಲಾಲ್‌ಬಾಗ್ ರಸ್ತೆ, ಬೆಂಗಳೂರು ಇವರಿಗೂ ಹಾರ್ದಿಕ ಶುಭಕಾಮನೆಗಳು ಸಲ್ಲುತ್ತದೆ.

ಎನ್. ರಂಗನಾಥ ಶರ್ಮಾ

ಶ್ರೀ

ವಾಲಿವಧ ಪ್ರಸಂಗ - ಧರ್ಮನಿಷ್ಠೆ

ವಾಲ್ಮೀಕಿ ಮುನಿಗಳ ಶ್ರೀಮದ್ರಾಮಾಯಣದಲ್ಲಿ ವಾಲಿವಧ ಪ್ರಸಂಗವು ಆಧುನಿಕ ವಿಮರ್ಶಕರ ಆಕ್ಷೇಪಕ್ಕೆ ವಿಷಯವಾಗಿದೆ. ಧರ್ಮಾತ್ಮ, ಸತ್ಯಸಂಧ, ಮರ್ಯಾದಾಪುರುಷೋತ್ತಮ ಎಂದೆಲ್ಲ ವಿಖ್ಯಾತನಾದ ಶ್ರೀರಾಮನು ಮರೆಯಲ್ಲಿ ನಿಂತು ವಾಲಿಯ ಮೇಲೆ ಬಾಣಪ್ರಯೋಗ ಮಾಡಿ ಸಂಹರಿಸಬಹುದೇ ? ಇದು ಅಧರ್ಮವೇ ಸರಿ - ಎಂದು ಬಹುಮಂದಿ ಹೇಳುತ್ತಾರೆ. ಆ ಪ್ರಕಾರದಲ್ಲಿ ಲೇಖನಗಳನ್ನು ಬರೆದು ಉಪನ್ಯಾಸಗಳನ್ನಿತ್ತು ಆಕ್ಷೇಪಿಸಿದ್ದಾರೆ. ಶ್ರೀರಾಮನ ಚಾರಿತ್ರದಲ್ಲಿ ಅನೇಕ ನ್ಯೂನತೆಗಳನ್ನು ಎತ್ತಿ ತೋರಿಸುವ

ಪ್ರವೃತ್ತಿ ಈ ಜನರಲ್ಲಿ ಎದ್ದು ಕಾಣುತ್ತದೆ. ಅಂತಹ ನ್ಯೂನತಾ ದೋಷಗಳಲ್ಲಿ ವಾಲಿವಧೆಯು ಪ್ರಬಲವಾದುದು. ಇದನ್ನು ಸಮರ್ಥಿಸಲು ಶಕ್ಯವೇ ಇಲ್ಲವೆಂದೂ ಇದೊಂದು ತಪ್ಪು ಕೆಲಸವೇ ಸರಿಯೆಂದೂ ಇವರ ಅಭಿಪ್ರಾಯವಿದೆ. ಪ್ರಾಚೀನ ವ್ಯಾಖ್ಯಾನಕಾರರು ಈ ಪ್ರಸಂಗವು ಧರ್ಮ ವಿರುದ್ಧವಲ್ಲವೆಂದು ಸಮರ್ಥಿಸಿದರೂ ಅವರು ಹೇಳಿದ ಸಮಾಧಾನವನ್ನು ಈ ವಿಮರ್ಶಕರು ಅಂಗೀಕರಿಸುವುದಿಲ್ಲ. ಪ್ರಾಚೀನರ ಸಮರ್ಥನೆಯೂ ಸ್ಪಷ್ಟರೂಪ ದಲ್ಲಿಲ್ಲದೆ ಮಸಕು ಮಸಕಾಗಿರುವುದೇ ಇದಕ್ಕೆ ಕಾರಣ. ಈ ಪರಂಪರೆಯಲ್ಲಿ ಬಂದ ರಾಮಾಯಣ ಪ್ರವಚನಕಾರರೂ ಈ ಪ್ರಸಂಗವನ್ನು ನಿರೂಪಿಸುವಾಗ, ಅದನ್ನು ವಿಸ್ತೃತವಾಗಿ ವಿವರಿಸದೆ ತೇಲಿಸಿ ಬಿಡುತ್ತಿದ್ದಾರೆ. ಇದನ್ನು ಸ್ಫುಟವಾಗಿ ಪರಿಶೀಲಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಒಬ್ಬ ವ್ಯಕ್ತಿಯ ಚಾರಿತ್ರದಲ್ಲಿ ದೋಷವನ್ನಾರೋಪಿಸುವುದು ಬಹು ಸುಲಭ. ಆತನ ಪೂರ್ವಾಪರಗಳೇನು, ಇತರ ಸಂದರ್ಭಗಳಲ್ಲಿ ಆತನು ಹೇಗೆ ನಡೆದುಕೊಂಡಿದ್ದಾನೆ, ಯಾವ ಧ್ಯೇಯ ಸಾಧನೆಗಾಗಿ ಆತನು ವ್ರತವನ್ನು ತೊಟ್ಟಿದ್ದಾನೆ, ಅವನ ಜೀವನ ವ್ರತದಲ್ಲಿ ಲೋಪವೆಂದು ತೋರಿದಾಗ ಅದು ಏಕೆ ನಡೆಯಿತು,

ಬುದ್ಧಿಪೂರ್ವಕವಾಗಿ ನಡೆದ ಲೋಪಾಭಾಸಕ್ಕೆ ಕಾರಣವೇನಿರಬಹುದು - ಎಂಬ ಹಿನ್ನೆಲೆಯನ್ನು ಪರೀಕ್ಷಿಸದಿದ್ದರೆ ಅದು ದೋಷವಾಗಿಯೇ ಕಂಡುಬಿಡುತ್ತದೆ. ಅಹಿಂಸಾ ವ್ರತಧಾರಿಗಳಾದ ಮಹಾತ್ಮ ಗಾಂಧೀಜಿ ಯವರ ಜೀವನದಲ್ಲಿಯೂ ಇಂತಹ ಘಟನೆಗಳು ಬಂದಿವೆ. ಒಂದು ಹಸುವಿನ ಕರು ಅಪಘಾತಕ್ಕೆ ಒಳಗಾಗಿ ತೀವ್ರವಾದ ಯಾತನೆಯನ್ನು ಅನುಭವಿಸುತ್ತ ಹೊರಳಾಡುತ್ತಿರುವುದು ಗಾಂಧೀಜಿಯವರಿಗೆ ಕಾಣಿಸಿತಂತೆ. ಅವರ ಹೃದಯ ಕರಗಿತು. ಆ ಕರು ಬದುಕು ವುದಿಲ್ಲವೆಂದು ವೈದ್ಯರು ಹೇಳಿದರು. ಅದನ್ನು ಗುಂಡಿಟ್ಟು ಕೊಲ್ಲುವುದು ಲೇಸೆಂದೂ ಅದು ಹೊರಳಾಡಿ ನರಳುತ್ತ ಬಹಳ ಹೊತ್ತು ನೋವನ್ನನುಭವಿಸುತ್ತಿರುವುದು ಕರುಣಾಜನಕವಾದ ಪರಿಸ್ಥಿತಿಯೆಂದೂ ಗಾಂಧೀಜಿಯವರಿಗೆ ತೋರಿತು. ಹಾಗೆಯೇ ಗುಂಡಿಟ್ಟು ಕೊಲ್ಲಿಸಿದರು. ಈ ಘಟನೆಯನ್ನೆತ್ತಿಕೊಂಡು ಗಾಂಧೀಜಿ ಯವರನ್ನು ನಾನಾ ವಿಧವಾಗಿ ದೂಷಿಸಿರುವುದನ್ನು ನಾನು ಸ್ವತಃ ಕೇಳಿದ್ದೇನೆ. ಹಾಗೆ ಕೊಲ್ಲುವುದು ಅಹಿಂಸಾವ್ರತದ ಪಾಲನೆಯೇ? ಅಥವಾ ಕ್ರೌರ್ಯದ ಕಠೋರ ವರ್ತನೆಯೇ?

ಶ್ರೀರಾಮಚರಿತ್ರದ ಪೂರ್ವಾಪರಗಳನ್ನೀಗ ಪರಿಶೀಲಿಸೋಣ:

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಂ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥

ಎಂದು ರಾಮಾಯಣದ ಆರಂಭ ಶ್ಲೋಕ. ತಪಸ್ವಿಗಳಾದ ವಾಲ್ಮೀಕಿ ಮುನಿಗಳು ತಪಸ್ವಿಗಳಾದ ನಾರದ ಮುನಿಗಳನ್ನು ಕುರಿತು ಪ್ರಶ್ನೆ ಹಾಕಿದ್ದಾರೆ. ಈ ಲೋಕದಲ್ಲಿ ಧರ್ಮಜ್ಞನೂ ಕೃತಜ್ಞನೂ ಸತ್ಯವಾಕ್ಯನೂ ದೃಢವ್ರತನೂ ಆದವನು - ಹೆಚ್ಚೇನು - ಸಕಲ ಸದ್ಗುಣ ಸಂಪನ್ನನೂ ಆದ ಮನುಷ್ಯನು ಯಾವನಾದರೂ ಇದ್ದಾನೆಯೇ ? ಎಂಬುದು ಅವರ ಪ್ರಶ್ನೆ. ಈ ಪ್ರಶ್ನೆಯಲ್ಲಿ ಹದಿನಾರು ಗುಣಗಳನ್ನು ಅವರು ಪಟ್ಟಿ ಮಾಡಿದ್ದಾರೆ. ಅವೆಲ್ಲವೂ ಧರ್ಮಾತ್ಮನೆಂಬುದರ ವಿಸ್ತಾರವೇ ಹೊರತು ಬೇರೆಯಲ್ಲ. ಸಕಲ ಸದ್ಗುಣಗಳೂ ಧರ್ಮಮೂಲವಾದವು. ಅವು ಧರ್ಮದ ವಿವಿಧ ಸ್ವರೂಪಗಳು. ಧರ್ಮವೃಕ್ಷದ ಕೊಂಬೆ, ರೆಂಬೆ, ಎಲೆ, ಹೂ ಹಣ್ಣುಗಳಿದ್ದಂತೆ. ವಾಲ್ಮೀಕಿ ಮುನಿಗಳ ಪ್ರಶ್ನೆಗೆ ನಿಮಿತ್ತ ಉಂಟು. ಲೋಕದಲ್ಲಿ ಧರ್ಮಾತ್ಮರೆಂದು ವಿಖ್ಯಾತರಾದವರು ಹಲವರಿದ್ದಾರೆ. ಹರಿಶ್ಚಂದ್ರ, ನಳ ಮೊದಲಾದ ರಾಜರೂ ಗೌತಮಾದಿ ಋಷಿಗಳೂ ಧರ್ಮಾತ್ಮರೇ. ಆದರೆ ಅವರ ಜೀವನದಲ್ಲಿ ಕಾಮ ಕ್ರೋಧಗಳಿಗೆ ವಶರಾಗಿ ಒಂದೊಂದು ವೇಳೆ ದಾರಿ ತಪ್ಪಿರುವುದುಂಟು. ರಾಮಾಯಣದಲ್ಲಿಯೇ ಇದನ್ನು ನೋಡಬಹುದು. ಭರತನು ತನ್ನ ತಾಯಿಯನ್ನು ಕೆಟ್ಟ ಮಾತುಗಳಿಂದ ನಿಂದಿಸಿದ್ದಾನೆ. ಲಕ್ಷ್ಮಣನು ತಂದೆಯನ್ನೇ ದೂಷಿಸಿದ್ದಾನೆ. ಶತ್ರುಘ್ನನು ಮಂಥರೆಯನ್ನು

ಕೊಳ್ಳಲು ಯತ್ನಿಸಿದ್ದಾನೆ. ಆದರೆ ಜೀವನದಲ್ಲಿ ನಾನಾ ಕಠಿಣ ಪರೀಕ್ಷೆಗಳು ಒದಗಿದರೂ ಒಂದು ಸಲವೂ ದಾರಿ ತಪ್ಪದೆ ಧರ್ಮವನ್ನು ರಕ್ಷಿಸಿಕೊಂಡು, ಧರ್ಮಕ್ಕಾಗಿ ನಾನಾ ಕಷ್ಟಗಳನ್ನನುಭವಿಸಿ ಅಪ್ಪಟ ಚಿನ್ನವಾಗಿ ಹೊರಬಂದ ಮಹಾತ್ಮನು ಯಾವನಾದರೂ ಇರಬಹುದೇ? ಎಂಬುದು ವಾಲ್ಮೀಕಿ ಮುನಿಗಳ ಜಿಜ್ಞಾಸೆಗೆ ಒಳಗಾಗಿದೆ. ಸ್ವತಃ ವಾಲ್ಮೀಕಿಗಳೇ ಹಿಂದೆ ವ್ಯಾಧ ವೃತ್ತಿಗೆ ಇಳಿದು ಹಿಂಸಾಕರ್ಮ ನಿರತರಾಗಿದ್ದವರು. ಆದ್ದರಿಂದ ಸರ್ವಾತ್ಮನಾ ಧರ್ಮಸಾರನಾದ ವ್ಯಕ್ತಿಯನ್ನು ತಿಳಿಯಲು ಅವರಿಗೆ ಕುತೂಹಲ ಉಂಟಾದದ್ದು ಸ್ವಾಭಾವಿಕ. ಅನಂತರ ನಾರದರು "ನೀವು ಗುಣಗಳ ಪಟ್ಟಿಯನ್ನೇ ಮಾಡಿದ್ದೀರಿ. ಅಪ್ಪಟ ಗುಣಗಳು ಯಾರಲ್ಲಿ ಅಭಿವ್ಯಕ್ತವಾದವೋ ಅಂತಹ ಮನುಷ್ಯನು ಲೋಕದಲ್ಲಿ ದುರ್ಲಭ. ಆದರೂ ಅಂತಹವನೊಬ್ಬನಿದ್ದಾನೆ" ಎಂದು ಹೇಳಿ ಶ್ರೀರಾಮನನ್ನು ಉದಾಹರಿಸಿದ್ದಾರೆ. ಅವನ ಕಥೆಯನ್ನು ಸಂಕ್ಷೇಪವಾಗಿ ತಿಳಿಸಿದ್ದಾರೆ.

ವಾಲ್ಮೀಕಿ ಮುನಿಗಳಿಗೆ ಶ್ರೀರಾಮನೇನೂ ಅಪರಿಚಿತನಲ್ಲ. ಅರಣ್ಯ ಕಾಂಡದಲ್ಲಿ ಆತನು ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಹೋಗಿದ್ದಾನೆ. ಸೀತಾ ವಿವಾಸನ ಸಂದರ್ಭದಲ್ಲಿ ಸೀತೆಗೆ ಆಶ್ರಯ ವನ್ನು ಕೊಟ್ಟು ಪಾಲಿಸಿದವರು ವಾಲ್ಮೀಕಿ ಮುನಿಗಳೇ. ಶ್ರೀರಾಮಚರಿತೆ

ಅವರಿಗೆ ತಿಳಿದದ್ದೇ. ವಾಲಿವಧೆ, ಸೀತಾವಿವಾಸನಾದಿಗಳು ಅವರ ಮನಸ್ಸಿಗೆ ಹೊಳೆದು, ಇವು ಧರ್ಮವಿರುದ್ಧವೇ, ಅಲ್ಲವೇ? - ಎಂದು ನಿರ್ಣಯಿಸಿಕೊಳ್ಳುವುದಕ್ಕಾಗಿ ನಾರದರನ್ನು ಕಂಡಾಗ ಈ ಪ್ರಶ್ನೆಯನ್ನೆತ್ತಿರಬೇಕು. ನಾರದರ ಮಾತಿನಿಂದ ಇದಾವುದೂ ದೋಷವಲ್ಲ - ಧರ್ಮ ವಿರುದ್ಧವಲ್ಲ ಎಂಬ ನಿರ್ಣಯ ಅವರ ಮನಸ್ಸಿನಲ್ಲಿ ಮೂಡಿತು. ಬ್ರಹ್ಮನೂ ಪ್ರತ್ಯಕ್ಷನಾಗಿ ರಾಮಾಯಣವನ್ನು ಬರೆಯುವಂತೆ ಪ್ರೇರಿಸಿದಾಗ, ಸಂದೇಹಕ್ಕೆ ಅವಕಾಶವೇ ಉಳಿಯಲಿಲ್ಲ. ಶ್ರೀರಾಮನ ಸಕಲ ಚಾರಿತ್ರವನ್ನು ತಮ್ಮ ತಪೋಬಲದಿಂದ, ಅಂಗೈಯಲ್ಲಿರುವ ನೆಲ್ಲಿಕಾಯಿಯಂತೆ ನೋಡಿ ರಾಮಾಯಣವನ್ನು ಬರೆಯಲು ಪ್ರಾರಂಭಿಸಿದರು. ಅವರ ಮನಸ್ಸಿನಲ್ಲಿ ಸಂದೇಹವೇನಾದರೂ ಉಳಿದಿದ್ದರೆ ಇಂತಹ ಉದ್ಗ್ರಂಥವನ್ನು ರಚಿಸುವುದಕ್ಕೆ ಕೈ ಹಾಕುತ್ತಲೇ ಇರಲಿಲ್ಲ. ನಾರದರನ್ನು ಕುರಿತು "ಮುನಿಗಳೆ, ಪರಾಙ್ಮುಖನಾಗಿದ್ದ ವಾಲಿಯನ್ನು ಕೊಂದ ರಾಮನು ಗರ್ಭಿಣಿಯಾದ ಪತ್ನಿಯನ್ನು ಯಾವ ಅಪರಾಧ ಮಾಡದಿದ್ದರೂ ಕಾಡಿಗೆ ಅಟ್ಟಿದವನು - ಹೇಗೆ ಧರ್ಮಾತ್ಮ? ಹೇಗೆ ದಯಾಶಾಲಿ ?" ಎಂದು ಕೇಳಿಯೇ ಬಿಡುತ್ತಿದ್ದರು.

ಸತ್ಯದಲ್ಲಿ ಹರಿಶ್ಚಂದ್ರ, ದಾನದಲ್ಲಿ ಶಿಬಿ ಚಕ್ರವರ್ತಿ, ಪಾತಿವ್ರತ್ಯದಲ್ಲಿ ಸೀತೆ - ಎಂಬ ವಿಖ್ಯಾತಿ ಯಾವ ಕಾರಣದಿಂದ

ಬರುತ್ತದೆ ? ಸತ್ಯವನ್ನು ಹೇಳತಕ್ಕವರು, ದಾನ ಮಾಡತಕ್ಕವರು ಬಹಳ ಜನರಿದ್ದಾರೆ. ತಮ್ಮ ಚಾರಿತ್ರದಲ್ಲಿ ಯಾವ ಕಳಂಕವೂ ಇಲ್ಲದಂತೆ ಬಾಳುತ್ತಿರುವ ಗೃಹಿಣಿಯರೂ ವಿಪುಲವಾಗಿದ್ದಾರೆ. ಹರಿಶ್ಚಂದ್ರಾದಿಗಳ ವೈಶಿಷ್ಟ್ಯವೇನು ? - ಎಂದರೆ, ಅತ್ಯಂತ ಕಠೋರ ಪರೀಕ್ಷೆಗೆ ಒಳಗಾದಾಗಲೂ ಪ್ರಾಣವನ್ನರ್ಪಿಸುವುದಕ್ಕೂ ಸಿದ್ಧರಾಗಿ ತಮ್ಮ ನೀತಿಯನ್ನು ಪಾಲಿಸಿಕೊಂಡು ಬಂದಿರುವುದೇ ಅವರ ವೈಶಿಷ್ಟ್ಯವಾಗಿದೆ. ಯಾವುದೇ ಪ್ರಲೋಭನಕ್ಕೂ ಒಳಗಾಗದೆ ತಮ್ಮ ಶೀಲಕ್ಕೆ ಚ್ಯುತಿ ಬಾರದಂತೆ ನಡೆದುಕೊಂಡರೆಂಬ ವಿಖ್ಯಾತಿ ಅವರ ಕೀರ್ತಿಗೆ ನಿಮಿತ್ತ. ಅಂತಹ ಸಂನಿವೇಶಗಳು ಇತರರಿಗೆ ಪ್ರಾಪ್ತವಾಗಲಿಲ್ಲವೆಂಬುದು ವಿಶೇಷ. ಹರಿಶ್ಚಂದ್ರಾದಿಗಳು ಸತ್ಯಾದಿ ಧರ್ಮಭೇದಗಳಲ್ಲಿ ಕೀರ್ತಿ ಶರೀರರಾಗಿ ಉಳಿದರು. ಶ್ರೀರಾಮ ನಾದರೋ ಧರ್ಮಮೂಲಗಳಾದ ಸಕಲ ಸದ್ಗುಣಗಳಲ್ಲಿಯೂ ವಿಖ್ಯಾತನಾದವನು. ಆದ್ದರಿಂದ 'ರಾಮೋ ವಿಗ್ರಹವಾನ್ ಧರ್ಮಃ' ಎಂಬ ಯಶಸ್ಸು ಅವನಿಗೆ ಲಭಿಸಿತು. ಶ್ರೀರಾಮನ ಧರ್ಮನಿಷ್ಠೆಗೆ ಕೆಲವೇ ನಿದರ್ಶನಗಳನ್ನಿಲ್ಲಿ ಸಂಗ್ರಹಿಸಬಹುದು.

೧. ಪಟ್ಟಾಭಿಷೇಕದ ಸಂತೋಷ ಪ್ರಸಂಗವನ್ನು ಕುರಿತು ಸೀತಾರಾಮರು ಅನ್ಯೋನ್ಯವಾಗಿ ಮಾತನಾಡಿಕೊಳ್ಳುತ್ತಿದ್ದಾಗ, ಅರಮನೆಗೆ ಬರಬೇಕೆಂಬ ದಶರಥನ ಆದೇಶವನ್ನು ಸುಮಂತ್ರನು

ಶ್ರೀರಾಮನಿಗೆ ತಿಳಿಸುತ್ತಾನೆ. ಅವನು ನೇರವಾಗಿ ಕೈಕೇಯಿಯ ಅಂತಃಪುರಕ್ಕೆ ಬರುತ್ತಾನೆ. ದಶರಥನು ಶೋಕಸಂತಪ್ತನಾಗಿ ಗರಬಡಿದವನಂತೆ ಮಾತನಾಡದೆ ಕುಳಿತಿದ್ದಾನೆ. ಕೈಕೇಯಿಯೇ ತನ್ನ ಎರಡು ವರಗಳ ವಿಷಯವನ್ನು ಶ್ರೀರಾಮನಿಗೆ ತಿಳಿಸುತ್ತಾಳೆ. ಕರ್ಣಕಠೋರವಾದ ಆ ಸಂಗತಿಯನ್ನು ಕೇಳಿಯೂ ಶ್ರೀರಾಮನು ವಿಚಲಿತನಾಗುವುದಿಲ್ಲ. ಭರತನಿಗೆ ಪಟ್ಟಾಭಿಷೇಕವಾಗಬೇಕೆಂಬ ವರವು ಲೋಭದಿಂದ ಬಂದದ್ದು; ಸಹಜ. ತಾನು ಹದಿನಾಲ್ಕು ವರ್ಷ ತಪಸ್ವಿಯಂತೆ ಕಾಡಿನಲ್ಲಿರಬೇಕೆಂಬ ಎರಡನೆಯ ವರ ಏಕೆ? ನಾನು ಯಾವ ಅಪರಾಧ ಮಾಡಿದ್ದಕ್ಕೆ ಈ ದಂಡನೆ ? ಈ ಪ್ರಶ್ನೆ ಮನುಷ್ಯ ಮಾತ್ರನಲ್ಲಿ ಉದಿಸುವುದು ಸಹಜ. ಆದರೆ ಆ ಧೀರೋದಾತ್ತನ ಪ್ರತಿಕ್ರಿಯೆಯೇನು ?

ಏವಮಸ್ತು ಗಮಿಷ್ಯಾಮಿ ವನಂ ವಸ್ತುಮಹಂ ತ್ವಿತಃ
ಜಟಾಚೀರಧರೋ ರಾಜ್ಞಃ ಪ್ರತಿಜ್ಞಾಮನುಪಾಲಯನ್ ॥

— *ಅಯೋ. ೧೯ನೇ ಸರ್ಗ.*

"ಆಗಬಹುದು. ನಾರು ಬಟ್ಟೆಯುಟ್ಟು, ಜಟೆಯನ್ನು ಧರಿಸಿ ಕಾಡಿನಲ್ಲಿರಲು ಹೊರಡುವೆನು. ಮಹಾರಾಜನು ಕೊಟ್ಟ ಪ್ರತಿಜ್ಞೆಯನ್ನು ಪಾಲಿಸುವುದೇ ನನ್ನ ಉದ್ದೇಶ."

ನಾಹಮರ್ಥಪರೋ ದೇವಿ ರಾಜ್ಯಮಾವಸ್ತುಮುತ್ಸಹೇ ।
ವಿದ್ಧಿ ಮಾಮೃಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಮ್ ॥

— ಅದೇ

"ನಾನು ಐಶ್ವರ್ಯವನ್ನು ಬಯಸತಕ್ಕವನಲ್ಲ, ಸುಖ ಪಡುವುದಕ್ಕಾಗಿ ರಾಜ್ಯದಲ್ಲಿರಲು ಯತ್ನಿಸತಕ್ಕವನಲ್ಲ, ದೇವಿ, ನಾನು ಧರ್ಮವನ್ನು ಮಾತ್ರ ನಂಬಿದವನೆಂದೂ ಋಷಿಗಳಂತೆ ಇರತಕ್ಕವನೆಂದೂ ತಿಳಿ"

ಕೌಸಲ್ಯೆಗೂ ಸೀತೆಗೂ ಈ ವಿಷಯವನ್ನುರುಹಿ ಈ ದಿನವೇ ಕಾಡಿಗೆ ಹೊರಡುತ್ತೇನೆಂದು ನಿಶ್ಚಯಿಸಿ ಬಿಡುತ್ತಾನೆ. ಪಟ್ಟಾಭಿಷೇಕದ ಸುದ್ದಿಯನ್ನು ತಂದೆ ಹೇಳಿದಾಗ ಅವನ ಮುಖವು ಎಷ್ಟು ಪ್ರಸನ್ನವಾಗಿತ್ತೋ ವನವಾಸದ ಆಜ್ಞೆಯನ್ನು ಕೇಳಿದಾಗಲೂ ಅವನ ಮುಖವು ಅಷ್ಟೇ ಪ್ರಸನ್ನವಾಗಿತ್ತು. ಮುಖದಲ್ಲಿ ಚಿಂತೆಯ ಲೇಶವೂ ಕಾಣಿಸಲಿಲ್ಲ. ಈ ಲೋಕೋತ್ತರ ಸ್ವಭಾವ ಶ್ರೀರಾಮನದು.

ಮಗನು ವನವಾಸಕ್ಕೆ ಹೋಗುತ್ತಾನೆಂಬುದನ್ನು ಕೇಳಿ ಕೌಸಲ್ಯೆ ಶೋಕದಿಂದ ಪರಿತಪಿಸುತ್ತ ಹೇಳುತ್ತಾಳೆ -

ಯಥೈವ ರಾಜಾ ಪೂಜ್ಯಸ್ತೇ ಗೌರವೇಣ ತಥಾ ಹ್ಯಹಮ್ ।
ತ್ವಾಂ ನಾಹಮನುಜಾನಾಮಿ ನ ಗಂತವ್ಯಮಿತೋ ವನಮ್ ॥

— ಅಯೋ. ಸರ್ಗ ೬ - ೨೧

“ರಾಮ, ರಾಜನಾದ ದಶರಥನು ನಿನಗೆ ಯಾವ ರೀತಿ ಪೂಜ್ಯನೋ ಹಾಗೆಯೇ ನಾನೂ ನಿನಗೆ ಪೂಜ್ಯಳು. ನನಗೂ ಗೌರವ ಸಲ್ಲಬೇಕು. ನೀನು ಕಾಡಿಗೆ ಹೋಗಲು ನಾನು ಅನುಮತಿ ಕೊಡುವುದಿಲ್ಲ. ನೀನು ಕಾಡಿಗೆ ಹೋಗಕೂಡದು ! ಇದು ನನ್ನ ಆಜ್ಞೆ. ಇದನ್ನು ಮೀರಿ ನೀನು ಕಾಡಿಗೆ ಹೋದರೆ ನಾನು ಉಪವಾಸವಿದ್ದು ಪ್ರಾಣಬಿಡುತ್ತೇನೆ. ಮಾತೃಹತ್ಯಾದೋಷ ನಿನಗೆ ಬರುತ್ತದೆ!”

ಈಗ ಶ್ರೀರಾಮನು ಏನು ಮಾಡಬೇಕು? ಧರ್ಮಶಾಸ್ತ್ರ ಹೇಳುತ್ತದೆ - ‘ಪಿತುರ್ದಶಗುಣಂ ಮಾತಾ ಗೌರವೇಣಾತಿ ರಿಚ್ಯತೇ - ತಂದೆಗಿಂತ ಹತ್ತರಷ್ಟು ಗೌರವವು ತಾಯಿಗೆ ಸಲ್ಲಬೇಕು’ ಎಂದು. ಶ್ರೀರಾಮನಲ್ಲದೆ ಇನ್ನೊಬ್ಬನಾಗಿದ್ದರೆ ‘ತಂದೆಗಿಂತ ತಾಯಿ ಹೆಚ್ಚಿನವಳು. ಕಾಡಿಗೆ ಹೋಗಕೂಡದೆಂದು ನನ್ನ ತಾಯಿ ಆಜ್ಞೆ ಮಾಡಿದ್ದಾಳೆ. ನಾನು ಕಾಡಿಗೆ ಹೋಗುವುದಿಲ್ಲ!’ ಎಂದು ಬಿಡುತ್ತಿದ್ದ! ಹೀಗೆ ನೆವ ಹುಡುಕಿ ಕಷ್ಟದಿಂದ ತಪ್ಪಿಸಿಕೊಳ್ಳುವುದು ಶ್ರೀರಾಮನ ಜಾಯಮಾನವೇ ಅಲ್ಲ. ಅವನು ತಾಯಿಗೇ ವಿವೇಕವನ್ನು ಹೇಳುತ್ತಾನೆ.

೧. ಅಮ್ಮ, ನೀನು ನನಗೆ ಪೂಜ್ಯಳೇ ಹೌದು, ನಿನಗೂ ಸಹ ಪೂಜ್ಯನಾದವನು ನನ್ನ ತಂದೆ. ಪತಿಯ ಆಜ್ಞೆಯನ್ನು

ಸಾಧ್ವಿಯಾದ ಪತ್ನಿಯು ತಳ್ಳಿಹಾಕಬಾರದು. ಅದು ಧರ್ಮವಲ್ಲ.

೨. ನನ್ನ ತಂದೆ ಮಹಾರಾಜ. ನಾನೂ ನೀನೂ ಇಬ್ಬರೂ ಆತನ ಪ್ರಜೆಗಳು. ರಾಜಾಜ್ಞೆಯನ್ನು ಪ್ರಜೆಗಳು ಮೀರಕೂಡದು.

೩. ಕೈಕೇಯಿಯು ಕೇಳಿದ ವರವನ್ನು ಸಲ್ಲಿಸುತ್ತೇನೆಂದು ತಂದೆಯು ಪ್ರತಿಜ್ಞೆ ಮಾಡಿ ಹೇಳಿದ್ದಾನೆ. ನನ್ನ ತಂದೆ ಸತ್ಯಸಂಧನೆಂದು ಸ್ಥಾಪಿಸಬೇಕಾದದ್ದು ನನ್ನ ಕರ್ತವ್ಯ.

ಕೌಸಲ್ಯೆಗೆ ಯಾವ ಉತ್ತರವೂ ತೋರಲಿಲ್ಲ. ಶ್ರೀರಾಮನ ವನವಾಸವನ್ನು ಅವಳು ಒಪ್ಪಿದಳು.

೩. ಇನ್ನೊಂದು ಸಂನಿವೇಶ. ಶ್ರೀರಾಮನು ವನವಾಸಕ್ಕೆ ಸಿದ್ಧನಾಗಿ ಸೀತಾಲಕ್ಷ್ಮಣರೊಡನೆ ತಂದೆಯನ್ನು ಬೀಳ್ಕೊಳ್ಳಲು ದಶರಥನ ಬಳಿಗೆ ಬಂದಿದ್ದಾನೆ. ಆ ವೃದ್ಧನಿಗೆ ದುಃಖವನ್ನು ತಡೆದು ಕೊಳ್ಳಲಾಗಲಿಲ್ಲ. "ರಾಮ, ಸತ್ಯವಾಗಿ ಹೇಳುತ್ತೇನೆ, ನೀನು ವನವಾಸಕ್ಕೆ ಹೋಗುವುದು ನನಗೆ ಸರ್ವಥಾ ಇಷ್ಟವಿಲ್ಲ. ಈ ದುಷ್ಟೆಯಾದ ಕೈಕೇಯಿ ನನ್ನನ್ನು ವಂಚಿಸಿ ಮಾತಿನಲ್ಲಿ

ಸಿಕ್ಕಿಸಿದಳು. ಭವ ರಾಜಾ ನಿಗೃಹ್ಯ ಮಾಂ - ನನ್ನನ್ನು ಸೆರೆಯಲ್ಲಿಟ್ಟು ನೀನು ರಾಜನಾಗು!" ಎಂದು ಹೇಳುತ್ತಾನೆ. ಇದೂ ತಂದೆಯ ಆಜ್ಞೆಯೇ! ಶ್ರೀರಾಮನು ಇದನ್ನೇ ಪಾಲಿಸಬಹುದಾಗಿತ್ತಲ್ಲ. ಮೊದಲು ತಾನು ಕೊಟ್ಟ ಮಾತನ್ನು ತಾನು ಪಾಲಿಸುವುದು ಮಾತ್ರವಲ್ಲ, ತನ್ನ ತಂದೆಯೂ ಸತ್ಯಸಂಧನೆಂಬುದನ್ನು ಸ್ಥಾಪಿಸುವುದೂ ಅವನ ಉದ್ದೇಶವಾಗಿತ್ತು.

ಶ್ರೀರಾಮನ ಧರ್ಮನಿಷ್ಠೆಯನ್ನು ವ್ಯಕ್ತಪಡಿಸುವ ಇಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು. ರಾಮಾಯಣವನ್ನು ಪೂರ್ತಿಯಾಗಿ ಓದಿದವರಿಗೆ ಇವೆಲ್ಲ ತಿಳಿದ ಸಂಗತಿಗಳೇ. ಈ ವಿಷಯವನ್ನು ಸ್ಮೃತಿಪಥಕ್ಕೆ ತರುವುದಕ್ಕಾಗಿ ಇಷ್ಟನ್ನು ಬರೆಯಬೇಕಾಯಿತು.

ವಾಲಿವಧ ಪ್ರಕರಣ

ಶ್ರೀರಾಮನು ಮರೆಯಲ್ಲಿ ನಿಂತು ಬಾಣ ಪ್ರಯೋಗ ಮಾಡಿ ವಾಲಿಯನ್ನು ಸಂಹರಿಸಿದನೆಂಬುದು ಸರ್ವವಿದಿತ. ತನ್ನೊಡನೆ ಯುದ್ಧಕ್ಕೆ ಬರದೆ ಪರಾಙ್ಮುಖನಾಗಿದ್ದವನನ್ನು ಕೊಲ್ಲುವುದು

ಧರ್ಮವಲ್ಲವೆನ್ನುವುದು ಆ ಕಾಲದ ಯುದ್ಧನೀತಿ, ಈ ಕಾಲದ್ದಲ್ಲ. ಆಗಿದ್ದ ನೀತಿಸಂಹಿತೆಯನ್ನನುಸರಿಸಿ ಆಗಿನ ಪಾತ್ರಗಳ ಧರ್ಮ ಪರೀಕ್ಷೆಯನ್ನು ಮಾಡಬೇಕು. ಈ ಕ್ರಮವು ಸರ್ವಪಾತ್ರಗಳ ವಿಮರ್ಶೆಗೂ ಅನ್ವಯಿಸುತ್ತದೆಯೆಂಬುದನ್ನು ವಿಮರ್ಶಕರು ನೆನಪಿನಲ್ಲಿಡಬೇಕು. ಹಾಗಾದರೆ ಮಾತ್ರ ಶೂದ್ರ ತಪಸ್ವಿಯಾದ ಶಂಬೂಕನ ಸಂಹಾರವು ಯುಕ್ತವೆ ? ಅಯುಕ್ತವೆ ? - ಎಂಬ ಪ್ರಶ್ನೆಗೆ ಉತ್ತರ ದೊರೆಯುತ್ತದೆ. ಇರಲಿ.

ಶ್ರೀರಾಮನ ಬಾಣದಿಂದ ಆಹತನಾದ ವಾಲಿ ನೆಲದ ಮೇಲೆ ಬಿದ್ದಾಗ ಶ್ರೀರಾಮನು ಲಕ್ಷ್ಮಣನೊಡನೆ ಹೋಗಿ ವಾಲಿಯ ಎದುರಿಗೆ ನಿಲ್ಲುತ್ತಾನೆ. ತಾರೆಯು ಹೇಳಿದ್ದ ಹಿತವಾದವು ವಾಲಿಯ ಸ್ಮರಣೆಗೆ ಬಂದಿತು. ಆತನೇ ದಶರಥಪುತ್ರನಾದ ರಾಘವನೆಂದು ಗೊತ್ತಾಯಿತು. ತೀಕ್ಷ್ಣವಾಕ್ಯಗಳಿಂದ ಶ್ರೀರಾಮನನ್ನು ದೂಷಿಸಿದನು.

ನಾವು ಶ್ರೀರಾಮನ ಮೇಲೆ ಯಾವ ಯಾವ ಆಕ್ಷೇಪಗಳನ್ನು ಎತ್ತಬಹುದೋ ಅವೆಲ್ಲವನ್ನು ವಾಲಿಯೇ ಹೇಳಿದ್ದಾನೆ. ಕ್ರಿಮಿನಲ್ ಕೋರ್ಟಿನಲ್ಲಿ ಒಬ್ಬ ನ್ಯಾಯವಾದಿಯು ಆರೋಪಿತನ ಮೇಲೆ ಯಾವ ಯಾವ ಆರೋಪಗಳನ್ನು ಹೊರಿಸುತ್ತಾನೋ ಅದೆಲ್ಲವನ್ನೂ

ವಾಲಿಯೇ ಹೇಳಿಬಿಟ್ಟಿರುವುದರಿಂದ ನಾವು ಹೊಸದಾಗಿ ಕಲ್ಪಿಸ ಬೇಕಾದ್ದೇನೂ ಇಲ್ಲ. ವಾಲಿಯ ವಾದದ ಸಾರಾಂಶ ಇಷ್ಟು.

೧. ರಾಮ, ನೀನು ಕ್ಷತ್ರಿಯನಾದ ರಾಜಪುತ್ರ. ಧರ್ಮಾತ್ಮ ನೆಂದು ಎಲ್ಲೆಲ್ಲಿಯೂ ನಿನ್ನ ಕೀರ್ತಿ ಹರಡಿದೆ. ನಿನ್ನ ರಾಜ್ಯಕ್ಕೆ ಬಂದು ನಾನು ಯಾವ ಅಪರಾಧವನ್ನು ಮಾಡಿಲ್ಲ. ನನ್ನ ಮೇಲೆ ಪ್ರಾಣಾಂತಿಕವಾದ ಶರವನ್ನು ಪ್ರಯೋಗಿಸಲು ಕಾರಣವೇನು?

೨. ಒಂದು ವೇಳೆ ಸುಗ್ರೀವನ ಸಹಾಯಕ್ಕಾಗಿ ನೀನು ಬಂದಿರುವೆಯಾದರೆ, ನನ್ನೊಡನೆ ನೇರವಾಗಿ ಯುದ್ಧ ಮಾಡಬೇಕಾಗಿತ್ತು. ನಾನು ಅವನೊಡನೆ ಯುದ್ಧದಲ್ಲಿ ತೊಡಗಿದಾಗ, ಮರೆಯಲ್ಲಿ ನಿಂತು ನನ್ನ ವಧೆಗೆ ಯತ್ನಿಸಿದ್ದು ಧರ್ಮವಲ್ಲ. ಅಧರ್ಮದ ಪಾಪಕೃತ್ಯವನ್ನು ಮಾಡಿದ್ದೀಯೆ.

೩. ನಾನು ವನಚರನೆಂದು ತಿಳಿದು ಹುಲಿ, ಜಿಂಕೆ - ಮೊದಲಾದ್ದನ್ನು ಕೊಲ್ಲುವಂತೆ ನನ್ನನ್ನು ಕೊಲ್ಲುವುದು ನಿನ್ನ ಉದ್ದೇಶವೆಂದೂ ಹೇಳಲಾಗುವುದಿಲ್ಲ. ನಾನು ವಾನರ. ನನ್ನ ಮಾಂಸವನ್ನು ಯಾರೂ ತಿನ್ನುವುದಿಲ್ಲ. ಚರ್ಮ ಮೂಳೆಗಳೂ ಸಹ ನಿಷಿದ್ಧವಾದವುಗಳು. ಈ ಸವಾಲುಗಳಿಗೆ ನಿನ್ನಲ್ಲಿ ಯಾವ

ಉತ್ತರವಿದೆ? ನೀನು ಘೋರವಾದ ಪಾಪಕೃತ್ಯವನ್ನೆಸಗಿದ್ದೀಯೆ.

ಇವು ತೀವ್ರವಾದ ಆಕ್ಷೇಪಗಳೇ ಹೌದು. ಶ್ರೀರಾಮನು ಧರ್ಮಾತ್ಮನೆಂದು ಮತ್ತೆ ಮತ್ತೆ ಹಾಡಿಹೊಗಳುವ ವಾಲ್ಮೀಕಿ ಮುನಿಗಳು ಯಾವುದನ್ನೂ ಮುಚ್ಚಿಡಲು ಹೋಗಲಿಲ್ಲ. ತಪ್ಪು ಎನ್ನಿಸುವುದನ್ನು ತೇಲಿಸಿ ಹಾರಿಸುವ ಪ್ರಯತ್ನವನ್ನು ಮಾಡಿಲ್ಲ. ವಾಲಿಯ ಪರವಾಗಿ ನಿಂತು ಅವರೇ ಪ್ರಬಲವಾಗಿ ವಾದಿಸಿದ್ದಾರೆ. ಸತ್ಯವನ್ನು ಶೋಧಿಸಿ ಧರ್ಮರಹಸ್ಯವನ್ನು ತಿಳಿಸುವ ಋಷಿ ಪ್ರಯತ್ನವಿದು.

ಈಗ ಶ್ರೀರಾಮನ ಉತ್ತರವೇನೆಂಬುದನ್ನು ನೋಡೋಣ. ವಾಲಿಯ ಮೂರು ಆಕ್ಷೇಪಗಳಿಗೆ ಅವನು ಹೇಳಿದ ಉತ್ತರಗಳನ್ನು ಯಥಾಕ್ರಮದಿಂದ ಸಂಕ್ಷೇಪವಾಗಿ ಬರೆದು, ಅನಂತರ ವಿವರಿಸಲಾಗುವುದು.

೧. ವಾಲಿ, ಕೋಸಲ ರಾಜ್ಯಕ್ಕೆ ಬಂದು ನೀನು ಅಪರಾಧವನ್ನು ಮಾಡದಿರಬಹುದು. ಕೋಸಲವು ಮಾತ್ರ ನಮ್ಮದೆಂದು ಭ್ರಮಿಸಬೇಡ. ಈ ಕಿಷ್ಕಿಂಧೆ, ಈ ಅರಣ್ಯ - ಈ ಸಮಸ್ತ ಭೂಮಿಯೂ ಇಕ್ಷ್ವಾಕು ವಂಶೀಯರಾದ ನಮಗೆ ಸೇರಿದ್ದು.

ಇಲ್ಲಿ ಅಧರ್ಮ ಕೃತ್ಯವೇನಾದರೂ ನಡೆದರೆ, ಅಪರಾಧಿಯನ್ನು ದಂಡಿಸುವ ಅಧಿಕಾರ ನಮಗಿದೆ. ನಾವು ಈ ಸಮಸ್ತ ಭೂಮಿಗೂ ಪ್ರಭುಗಳು.

೨. ಸುಗ್ರೀವನಿಗೆ ಸಹಾಯ ಮಾಡಬೇಕೆಂದು ನನ್ನ ಸಂಕಲ್ಪವಿರುವುದೇನೋ ದಿಟ. ಏಕೆಂದರೆ, ನೀನು ಆತನ ಹೆಂಡತಿಯಾದ ರುಮೆಯನ್ನು ಅಂತಃಪುರಕ್ಕೆ ಸೇರಿಸಿಕೊಂಡು ಘೋರವಾದ ಅಪರಾಧವನ್ನು ಮಾಡಿದ್ದೀಯೆ. ತಮ್ಮನ ಹೆಂಡತಿಯನ್ನು ಸೊಸೆಯಂತೆ - ಮಗಳಂತೆ ಕಾಣಬೇಕೆಂದು ಧರ್ಮಶಾಸ್ತ್ರವು ಹೇಳುತ್ತದೆ. ಮಗಳ ಮೇಲೆ ಅತ್ಯಾಚಾರವನ್ನೆಸಗುವುದು ದಂಡನೀಯವಾದ ಪಾಪಕೃತ್ಯ. ಕಿಷ್ಕಿಂಧೆಗೆ ರಾಜನಾದ ನೀನೇ ಇಂತಹ ಅಪರಾಧವನ್ನು ಮಾಡಿದಾಗ ನಾನು ಉಪೇಕ್ಷಿಸುವುದು ಸಾಧ್ಯವೇ ಅಲ್ಲ. ಇಂತಹ ಅಪರಾಧಕ್ಕೆ ಮರಣ ದಂಡನೆಯನ್ನು ವಿಧಿಸಬೇಕೆಂದು ಧರ್ಮಶಾಸ್ತ್ರವು ಹೇಳಿದೆ. ಆದ್ದರಿಂದ ನಿನಗೆ ಮರಣ ದಂಡನೆಯನ್ನು ವಿಧಿಸಿ, ಜಾರಿಗೊಳಿಸಿದ್ದೇನೆ. ನಿನ್ನೊಡನೆ ಯುದ್ಧಮಾಡಲು ನಾನು ಬರಲೇ ಇಲ್ಲ. 'ಪರಾಙ್ಮುಖವಧೆ'ಯ ಪ್ರಶ್ನೆ ಇಲ್ಲಿ ಏಳುವುದೇ ಇಲ್ಲ. ಅದು ಯುದ್ಧಕ್ಕೆ ಮಾತ್ರ

ಸೀಮಿತವಾದದ್ದು. ಮರಣ ದಂಡನೆಗೆ ಅದು ಅನ್ವಯಿಸುವುದಿಲ್ಲ.

೩. "ನಾವು ವಾನರ ಜಾತಿಯವರು. ಧರ್ಮಶಾಸ್ತ್ರವು ನಮಗೆ ಅನ್ವಯಿಸುವುದಿಲ್ಲ. ಮೃಗಪಶುಗಳಲ್ಲಿ ಅಣ್ಣನ ಹೆಂಡತಿ, ತಮ್ಮನ ಹೆಂಡತಿ ಎಂಬ ವಿಭಾಗವೇನೂ ಇಲ್ಲ" ಎಂದು ಒಂದು ವೇಳೆ ನೀನು ಹೇಳುವುದಾದರೆ, ಅದಕ್ಕೆ ನನ್ನ ಉತ್ತರ ಇದು. ಕ್ಷತ್ರಿಯ ರಾಜರಿಗೆ ಬೇಟೆಯಾಡುವುದು ಒಂದು ಲೀಲಾ ವಿನೋದ. ಧರ್ಮನಿಷ್ಠರೆಂದು ವಿಖ್ಯಾತರಾದ ಶಿಷ್ಟರೂ ಸಹ ಮೃಗಯಾ ಲೀಲೆಯಲ್ಲಿ ತೊಡಗಿದ್ದಾರೆ. ಬಲೆಯನ್ನೊಡ್ಡಿ ಮೃಗಗಳನ್ನು ಹಿಡಿಯುತ್ತಾರೆ. ಮರೆಯಲ್ಲಿ ನಿಂತು ಹುಲಿ ಮೊದಲಾದವನ್ನು ಕೊಲ್ಲುತ್ತಾರೆ. ಅಲ್ಲಿ ವಂಚನೆಯ ಪ್ರಶ್ನೆ ಇಲ್ಲ. ಮಾಂಸ, ಮೂಳೆ, ಚರ್ಮಗಳಿಗೆ ಬೇಟೆಯು ಸೀಮಿತವೂ ಅಲ್ಲ. ಆದ್ದರಿಂದ ಬೇಟೆಯಾಡಿ ನಿನ್ನನ್ನು ಕೊಲ್ಲುತ್ತಿದ್ದೇನೆಂದು ತಿಳಿ.

ವಿವರಣೆ

ಮೊದಲನೆಯ ಆಕ್ಷೇಪಕ್ಕೆ ಉತ್ತರ ಹೇಳುವಾಗ ಶ್ರೀರಾಮನು

ಇಕ್ಷ್ವಾಕೂಣಾಮಿಯಂ ಭೂಮಿಃ ಸಶೈಲವನಕಾನನಾ ॥
ಮೃಗಪಕ್ಷಿಮನುಷ್ಯಾಣಾಂ ನಿಗ್ರಹಪ್ರಗ್ರಹಾವಪಿ ॥

— ಕಿಷ್ಕಿ. ಸರ್ಗ ೧೮

ಎಂದಿದ್ದಾನೆ. ಇದು ಸತ್ಯವಾದ ಹೇಳಿಕೆ. ರಾಮಾಯಣ ಕಥಾರಂಭದಲ್ಲಿಯೇ 'ಸರ್ವಾಽಪೂರ್ವಮಿಯಂ ಯೇಷಾಮಾಸೀತ್ ಕೃತ್ಸ್ನಾ ವಸುಂಧರಾ' ಎಂದು ಹೇಳಿದೆ. ಸಮಸ್ತ ಭೂಮಂಡಲವೂ ಇಕ್ಷ್ವಾಕು ವಂಶದವರಿಗೆ ಅಧೀನವಾಗಿತ್ತು. ಆ ವಂಶದವನಾದ ದಶರಥನು ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಅವನು ಮಹಾಶೂರ, ಅತಿರಥ. ಜಗತ್ತನ್ನೇ ಪಾಲಿಸುತ್ತಿದ್ದ. ದೇವಾಸುರ ಯುದ್ಧದಲ್ಲಿ ಇಂದ್ರನು ಅವನನ್ನು ಸಹಾಯಕ್ಕಾಗಿ ಕರೆಸಿಕೊಂಡಿದ್ದ. ದಶರಥನಿಗೆ ಎಂಟು ಮಂದಿ ಮಂತ್ರಿಗಳಿದ್ದರು. ಅವನ ರಾಜಸಭೆಯಲ್ಲಿ ಸಾಮಂತ ರಾಜರು ನೆರೆದಿರುತ್ತಿದ್ದರು ಎಂದು ರಾಮಾಯಣದಲ್ಲಿ ವರ್ಣನೆ ಇದೆ. ಇದು ಒಬ್ಬ ಸಾಮಾನ್ಯ ರಾಜನಿಗೆ ಅನ್ವಯಿಸತಕ್ಕ ಮಾತಲ್ಲ. ದಶರಥನು ಅಶ್ವಮೇಧ ಯಾಗವನ್ನು ಮಾಡಿದ. ಸಮಸ್ತ ರಾಜರನ್ನೂ ಜಯಿಸಿ ಕಪ್ಪ ಕಾಣಿಕೆಗಳನ್ನು ಪಡೆಯುವ ಚಕ್ರವರ್ತಿಯು ಮಾತ್ರ ಆಚರಿಸತಕ್ಕ ಯಾಗವದು. ದಶರಥನು ಕೈಕೇಯಿಗೆ 'ಯಾವದಾವರ್ತತೇ ಚಕ್ರಂ ತಾವತೀ ಮೇ ವಸುಂಧರಾ' ಸೂರ್ಯನ ರಥಚಕ್ರವು ಎಲ್ಲೆಲ್ಲಿ ಸುಳಿದಾಡುವುದೋ ಅಲ್ಲಿಯವರೆಗಿರುವ ವಸುಂಧರೆ ನನಗೆ ಸೇರಿದ್ದು' ಎಂದಿದ್ದಾನೆ. ಸಿಂಧು, ಸೌವೀರ, ಸೌರಾಷ್ಟ್ರ, ದಕ್ಷಿಣಾಪಥ, ವಂಗ, ಅಂಗ, ಮಾಗಧ, ಮತ್ಸ್ಯ, ಕಾಶಿ, ಕೋಸಲಗಳು ನನ್ನ ಅಧೀನದಲ್ಲಿವೆ

ಎಂದಿದ್ದಾನೆ. (ಅಯೋ. ಸರ್ಗ ೧೦). ದಕ್ಷಿಣಾಪಥವು ನನ್ನದು ಎಂದಿರುವುದು ಪ್ರಕೃತದಲ್ಲಿ ಗಮನಾರ್ಹ. ಕಿಷ್ಕಿಂಧೆ ದಕ್ಷಿಣಾಪಥದಲ್ಲಿ ಸೇರುತ್ತದೆ.

ಶ್ರೀರಾಮನನ್ನು ಕರೆತರಲು ಭರತನು ಚಿತ್ರಕೂಟಕ್ಕೆ ಹೋದನಷ್ಟೆ. ಜೊತೆಯಲ್ಲಿ ಕೌಸಲ್ಯೆ, ಸುಮಿತ್ರೆ, ಕೈಕೇಯಿ - ಮೊದಲಾದ ಸ್ತ್ರೀಯರೂ ಹೋಗಿದ್ದರು. ದಶರಥನ ಮರಣ ವಾರ್ತೆಯನ್ನರಿತು ಶ್ರೀರಾಮನು ತಂದೆಗೆ ಇಂಗುದೀಫಲಗಳಿಂದ ಪಿಂಡಪ್ರದಾನ ಮಾಡಿದ್ದನು. ಬೆಟ್ಟವನ್ನು ಹತ್ತುವಾಗ ಕೌಸಲ್ಯೆಗೆ ಆ ಪಿಂಡಗಳು ಗೋಚರಿಸಿದವು. ಅವನ್ನು ನೋಡಿ ಕೌಸಲ್ಯೆಯ ದುಃಖವು ಉಮ್ಮಳಿಸಿತು. ಅವಳು ಹೇಳುತ್ತಾಳೆ.

ಚತುರಂತಾಂ ಮಹೀಂ ಭುಕ್ತ್ವಾ ಮಹೇಂದ್ರಸದೃಶೋ ಭುವಿ ।
ಕಥಮಿಂಗುದಿಪಿಣ್ಯಾಕಂ ಸ ಭುಂಕ್ತೇ ವಸುಧಾಧಿಪಃ ॥

— *ಅಯೋ. ಸರ್ಗ ೧೦೩*

"ದಶರಥ ಮಹಾರಾಜನು ಚತುಃಸಾಗರಪರ್ಯಂತವಾದ ಭೂಮಿಯನ್ನು ಆಳುತ್ತ ಭೂಲೋಕದ ದೇವೇಂದ್ರನೋ ಎಂಬಂತೆ ವಿರಾಜಿಸಿದವನು. ಅವನೀಗ ಇಂಗುದೀ ಹಣ್ಣಿನ ಪಿಂಡವನ್ನು ತಿನ್ನಬೇಕಾಯಿತೇ ?" ಎಂದು ಹಲುಬುತ್ತಾಳೆ. ಇತ್ಯಾದಿ ಪ್ರಮಾಣ

ಗಳಿಂದ ದಶರಥನು ಸಾರ್ವಭೌಮನಾದ ಚಕ್ರವರ್ತಿಯೆಂಬುದು ನಿಶ್ಚಿತ. ಆ ಕಾಲದಲ್ಲಿ ರೈಲು, ದೂರವಾಣಿ ಮೊದಲಾದ ಸಂಪರ್ಕ ಸಾಧನಗಳಿಲ್ಲದ್ದರಿಂದ ನೇರವಾಗಿ ಚಕ್ರವರ್ತಿಯು ಆಡಳಿತವನ್ನು ನಡೆಸುತ್ತಿರಲಿಲ್ಲ. ಅಧೀನ ರಾಜ್ಯಗಳು ಸಾಮಂತರ ವಶದಲ್ಲಿದ್ದವು. ಅವರು ನಿಯಮಿತವಾದ ಕಪ್ಪ ಕಾಣಿಕೆಗಳನ್ನು ಚಕ್ರವರ್ತಿಗೆ ಅರ್ಪಿಸುತ್ತಿದ್ದರು. ಆ ರಾಜ್ಯಗಳಲ್ಲಿ ದುಷ್ಕೃತ್ಯವೇನಾದರೂ ನಡೆದರೆ ಅದನ್ನು ಚಕ್ರವರ್ತಿಯು ವಿಚಾರಿಸಿಕೊಳ್ಳುತ್ತಿದ್ದನು. ಶ್ರೀರಾಮನು ಕಿಷ್ಕಿಂಧೆಯನ್ನು ಸುಗ್ರೀವನಿಗೆ ಒಪ್ಪಿಸಿದನು. ಲಂಕೆಯ ಒಡೆತನಕ್ಕೆ ವಿಭೀಷಣನನ್ನು ನೇಮಿಸಿದನು. ಕಾಳಿದಾಸನು ರಘುವಂಶ ಕಾವ್ಯದಲ್ಲಿ ರಘುವಿನ ದಿಗ್ವಿಜಯವನ್ನು ವಿಸ್ತಾರವಾಗಿ ವರ್ಣಿಸಿದ್ದಾನೆಂಬುದನ್ನಿಲ್ಲಿ ಸ್ಮರಿಸಿಕೊಳ್ಳಬೇಕು.

೨. ನಿನಗೆ ವಿಧಿಸಿರುವುದು ಮರಣ ದಂಡನೆ ಎಂದು ಎರಡನೆಯ ಆಕ್ಷೇಪಕ್ಕೆ ಸಮಾಧಾನ. ಶ್ರೀರಾಮನ ಮೇಲೆ ಮಾಡಿದ ಎಲ್ಲ ಆಪಾದನೆಗಳನ್ನು ತಳ್ಳಿ ಹಾಕುವ ಗಟ್ಟಿಯಾದ ಉತ್ತರ ಇದೇ. ಶ್ರೀರಾಮನು ಹೇಳಿದ್ದೇನೆಂದರೆ -"ಎಲೈ ಕಪೀಶ್ವರ, ಸಜ್ಜನರ ಧರ್ಮಮಾರ್ಗವು ಅತಿಸೂಕ್ಷ್ಮವಾದುದು. ಅದರ ತತ್ತ್ವವನ್ನರಿಯುವುದು ಬಹು ಕಷ್ಟ. ಹೃದಯದಲ್ಲಿರುವ

ಅಂತರ್ಯಾಮಿಯಾದ ಆತ್ಮಸ್ಸೊಬ್ಬನಿಗೆ ಇದು ಸರಿ - ಇದು ತಪ್ಪು ಎಂದು ಧರ್ಮಾ ಧರ್ಮಗಳ ವಿವೇಕ ಜ್ಞಾನವಿರುತ್ತದೆ. ನೀನು ಮೊದಲೇ ಚಪಲ ಸ್ವಭಾವದ ವಾನರ. ಕಪಿಗಳೊಡನೆ ಸಮಾಲೋಚಿಸುವ ನಿನಗೆ ಧರ್ಮದ ನಿರ್ಣಯ ಹೇಗಾದೀತು? ರೋಷಾವೇಷದಿಂದ ನನ್ನನ್ನು ನಿಂದಿಸಬೇಡ. ನೀನು ಸನಾತನ ಧರ್ಮವನ್ನುಲ್ಲಂಘಿಸಿ, ಸೊಸೆಗೂ ಮಗಳಿಗೂ ಸಮಾನಳಾದ ಸುಗ್ರೀವನ ಪತ್ನಿಯಲ್ಲಿ ರಮಿಸುತ್ತಿದ್ದೀಯೆ. ಈ ತಪ್ಪಿಗಾಗಿ ನಿನಗೆ ಮರಣ ಶಿಕ್ಷೆಯನ್ನು ವಿಧಿಸಬೇಕಾಯಿತು. 'ತಸ್ಯ ದಂಡೋ ವಧಃ ಸ್ಮೃತಃ' ಎಂದು ಧರ್ಮಶಾಸ್ತ್ರವು ಸ್ಪಷ್ಟವಾಗಿ ಹೇಳಿದೆ. ಇದಕ್ಕೆ ಬೇರೆ ಪರಿಹಾರವಿಲ್ಲ. ನಿನ್ನನ್ನು ವಧಿಸುತ್ತೇನೆಂದು ಅಗ್ನಿ ಸಾಕ್ಷಿಕವಾಗಿ ಸುಗ್ರೀವನಿಗೆ ಪ್ರತಿಜ್ಞೆ ಮಾಡಿ ಹೇಳಿದ್ದೇನೆ. ವಧೆಯೇ ದಂಡವಾದ್ದರಿಂದ ಹಾಗೆ ಪ್ರತಿಜ್ಞೆ ಮಾಡಿದೆ. ಅದನ್ನು ನೀನು ಪಾಲಿಸಲೇಬೇಕು. ನನ್ನ ವಂಶದಲ್ಲಿ ಪೂಜ್ಯನಾದ ಮಾಂಧಾತನೂ ಕೂಡ, ನಿನ್ನಂತೆಯೇ ತಪ್ಪು ಮಾಡಿದ ಒಬ್ಬ ಶ್ರಮಣನನ್ನು ಹೀಗೆಯೇ ವಧಿಸಿದ್ದಾನೆ. ಅದು ನನಗೆ ಆದರ್ಶ. ಆದ್ದರಿಂದ ವ್ಯಥೆ ಪಡಬೇಡ. 'ಧರ್ಮತಃ ಪರಿಕಲ್ಪಿತೋ ವಧಃ'.

ಮರಣ ದಂಡನೆಯನ್ನು ಜಾರಿಗೊಳಿಸುವಾಗ ಅಪರಾಧಿಯೊಡನೆ ಯಾವ ರಾಜನಾಗಲಿ ನ್ಯಾಯಾಧಿಪತಿಯಾಗಲಿ ಯುದ್ಧ ಮಾಡುವುದಿಲ್ಲ. ನೇಣು ಹಾಕಿ ಕೊಲ್ಲಬಹುದು. ವಿಷಪ್ರಾಶನ ಮಾಡಿಸಬಹುದು. ಜನರೆದುರಿಗೆ ನಿಲ್ಲಿಸಿ ತಲೆಯನ್ನು ಕತ್ತರಿಸಬಹುದು. ಚುಚ್ಚು ಮದ್ದಿನಿಂದ ಸಾಯಿಸಬಹುದು. ಆಯಾ ಕಾಲದ ಕಾನೂನಿನಂತೆ ಮರಣ ದಂಡನೆ ಜಾರಿಗೆ ಬರುತ್ತದೆ. ಎದುರಾಗಿ ಬಂದವನ ಮೇಲೆಯೇ ಬಾಣವನ್ನು ಪ್ರಯೋಗಿಸಬೇಕೆಂಬುದು ಯುದ್ಧದ ನಿಯಮ. ದಂಡನೆಯ ನಿಯಮವಲ್ಲ. 'ಈ ವಧೆಯನ್ನು ಧರ್ಮಮಾರ್ಗದಿಂದಲೇ ಮಾಡಿದ್ದೇನೆ' ಎಂದು ಶ್ರೀರಾಮನು ನುಡಿದಾಗ, ತಿಲಕ ವ್ಯಾಖ್ಯಾನದಲ್ಲಿ "ಏತೇನ ಅದರ್ಶನಪೂರ್ವಕಂ ವಧೋಽಧರ್ಮ ಇತಿ ಯದುಕ್ತಂ ತದಪಿ ಸಮಾಹಿತಂ । ದಂಡಾರ್ಥವಧೇ ದರ್ಶನಾನಪೇಕ್ಷಣಾತ್" ಎಂದು ಸ್ಪಷ್ಟವಾಗಿ ಬರೆದಿದ್ದಾರೆ. 'ದಂಡಾರ್ಥವಾದ ವಧೆಯಲ್ಲಿ ಎದುರಿಗೆ ಬಂದು ಕಾಣಿಸಿಕೊಳ್ಳಬೇಕಾದ್ದಿಲ್ಲ' ಎಂದು, ನಾಗೇಶಭಟ್ಟರು ತೀರ್ಪು ಹೇಳಿದ್ದಾರೆ. ಆದ್ದರಿಂದಲೇ 'ಸೂಕ್ಷ್ಮಃ ಪರಮದುರ್ಜ್ಞೇಯಃ ಸತಾಂ ಧರ್ಮಃ ಪ್ಲವಂಗಮ' ಎಂದು ಶ್ರೀರಾಮನು ನುಡಿದದ್ದು. ಈ ಧರ್ಮಸೂಕ್ಷ್ಮವನ್ನರಿಯದೆ ಈಗಿನ ವಿಮರ್ಶಕರು ಆಕ್ಷೇಪಣೆಗಳನ್ನು ಮಾಡುತ್ತಲೇ ಇದ್ದಾರೆ. 'ದಂಡಃ, ದಂಡಃ' ಎಂಬ ಶಬ್ದವನ್ನು

ಶ್ರೀರಾಮನು ಮತ್ತೆ ಮತ್ತೆ ಪ್ರಯೋಗಿಸಿದ್ದಾನೆ. ಈ ಜನರಿಗೆ ಆ ಶಬ್ದದ ಕಡೆ ಗಮನವೇ ಇಲ್ಲ. "ನನ್ನ ಪಿತೃಪಿತಾಮಹರು ತೋರಿಸಿಕೊಟ್ಟ ಧರ್ಮಮಾರ್ಗದಲ್ಲಿ ನಾನು ಸ್ಥಿರವಾಗಿ ನಿಂತವನು" ಎಂದು ಶ್ರೀರಾಮನು ಧೀರವಾಣಿಯಿಂದ ದಿಟ್ಟತನದಲ್ಲಿ ಉತ್ತರಿಸಿದನೇ ಹೊರತು ತನ್ನ ಕಾರ್ಯಕ್ಕಾಗಿ ಸಂಕೋಚವನ್ನು ವ್ಯಕ್ತಪಡಿಸಲೇ ಇಲ್ಲ. ಏಕೆಂದರೆ, ತಾನು ಧರ್ಮಚ್ಯುತನಲ್ಲವೆಂದು ಅವನಿಗೆ ನಿಶ್ಚಯವಿತ್ತು. ಅನಂತರ ವಾಲಿಯೂ ಸಹ

ನ ದೋಷಂ ರಾಘವೇ ದಧ್ಯೌ ಧರ್ಮೇಽಧಿಗತನಿಶ್ಚಯಃ ||

'ಶ್ರೀರಾಮನಲ್ಲಿ ಯಾವ ದೋಷವನ್ನೂ ಕಾಣಲಿಲ್ಲ. ಧರ್ಮಸ್ವರೂಪವೇನೆಂಬುದು ಅವನಿಗೆ ನಿಶ್ಚಯವಾಯಿತು. ಆದ್ದರಿಂದಲೇ ಆತನು ತಾನಾಡಿದ ದುರ್ವಾಕ್ಯಗಳಿಗೆ ಪಶ್ಚಾತ್ತಾಪಪಟ್ಟು ಶ್ರೀರಾಮನ ಕ್ಷಮಾಪಣೆಯನ್ನು ಕೇಳಿದ್ದಾನೆ. ವಾಲಿಯೇ ಸರಿಯೆಂದು ಒಪ್ಪಿಕೊಂಡಿರುವಾಗ ಈ ವಿಮರ್ಶಕ ಮಹನೀಯರು ಒಪ್ಪಿಕೊಳ್ಳು ವುದಿಲ್ಲ. ವಾಲಿಗೇ ಬುದ್ಧಿಭ್ರಮಣೆಯಾಯಿತೆಂದು ಹೇಳುತ್ತಾರೋ ಏನೋ!

'ನ ದೋಷಂ ರಾಘವೇ ದಧ್ಯೌ ಧರ್ಮೇಽಧಿಗತ ನಿಶ್ಚಯಃ' ಎಂಬುದು ವಾಲ್ಮೀಕಿ ಮುನಿಗಳ ನುಡಿ. ಈ ಮಾತಿನಿಂದಲೂ

ವಾಲಿಯು ಕ್ಷಮಾಪಣೆಯನ್ನು ಕೇಳಿಕೊಂಡನೆಂದು ಹೇಳಿರುವುದರಿಂದಲೂ ಶ್ರೀರಾಮನು ಧರ್ಮಸಂಮತವಾಗಿಯೇ ವಾಲಿಯನ್ನು ಸಂಹರಿಸಿದ್ದಾನೆಂದು ವಾಲ್ಮೀಕಿ ಮುನಿಗಳೇ ನಿಶ್ಚಯಿಸಿ ತಿಳಿಸಿದ್ದಾರೆಂದು ಗೊತ್ತಾಗುತ್ತದೆ. ಧರ್ಮನಿರ್ಣಯದಲ್ಲಿ ಋಷಿವಾಕ್ಯಕ್ಕಿಂತಲೂ ಅಧಿಕವಾದ ಪ್ರಮಾಣ ಯಾವುದು? ಅವರು ರಾಮಪಕ್ಷಪಾತಿಗಳಾಗಿದ್ದರೆ ವಾಲಿಗೂ ಶ್ರೀರಾಮನಿಗೂ ಯುದ್ಧವೇ ನಡೆಯಿತೆಂದೂ ಯುದ್ಧದಲ್ಲಿ ವಾಲಿಯು ಹತನಾದವೆಂದೂ ಬರೆಯಬಹುದಾಗಿತ್ತು. ನಡೆದದ್ದನ್ನು ಅವರು ಬರೆದರು. ಇದ್ದುದನ್ನು ವಿವರಿಸಿದರು. 'ಋಷಯಃ ಸತ್ಯವಚಸಃ' ಎನ್ನುವುದು ಈ ಕಾರಣದಿಂದ.

ವಾನರರಿಗೆ ಧರ್ಮಶಾಸ್ತ್ರದ ಸಂಬಂಧವಿಲ್ಲವೆನ್ನುವುದು ಪ್ರಾಕೃತ ವಾನರ ಜಾತಿಯವರಿಗೆ. ವಾಲಿ, ಸುಗ್ರೀವ, ಹನುಮಂತ-ಮೊದಲಾದವರು ಪ್ರಾಕೃತ ವಾನರರಲ್ಲ. ಅವರು ಮಾತಾಡುತ್ತಿದ್ದರು. ಯುಕ್ತಾಯುಕ್ತ ವಿವೇಚನಾ ಶಕ್ತಿ ಇತ್ತು. ಸರ್ವವಿಧದಲ್ಲಿಯೂ ಮಾನವರಂತೆಯೇ ನಡೆದುಕೊಂಡಿದ್ದಾರೆ. ವಾಲಿಯು ಸಂಧ್ಯಾವಂದನೆಯನ್ನು ಮಾಡುತ್ತಿದ್ದನೆಂದು ಉತ್ತರ ಕಾಂಡದಲ್ಲಿ ವರ್ಣನೆ ಇದೆ. ಯಾರಿಗೆ ಜ್ಞಾನಶಕ್ತಿ ಇದೆಯೋ ಅವರಿಗೆ ಶಾಸ್ತ್ರ ವಿಧಿ ಅನ್ವಯಿಸುತ್ತದೆಯೆಂದು ಶಾಸ್ತ್ರ ಸಿದ್ಧಾಂತವಿದೆ. ವಾಲಿಯ ಕೊರಳಲ್ಲಿ ಒಂದು ಹಾರವಿತ್ತೆಂದೂ ಅದು ಎದುರಾಳಿಯ ಅರ್ಧಶಕ್ತಿಯನ್ನು

ಅಪಹರಿಸಿ ವಾಲಿಗೆ ಕೊಟ್ಟು ಬಿಡುತ್ತಿದ್ದಿತೆಂದೂ ಆದ್ದರಿಂದ ಶ್ರೀರಾಮನು ಮರೆಯಲ್ಲಿ ನಿಂತು ಅವನನ್ನು ಕೊಲ್ಲಬೇಕಾಯಿತೆಂದೂ ಕೆಲವರು ಹೇಳುತ್ತಾರೆ. ಇದರಿಂದ ಶ್ರೀರಾಮನನ್ನೇನೂ ದೋಷಮುಕ್ತನನ್ನಾಗಿ ಸಾಧಿಸಿದಂತಾಗುವುದಿಲ್ಲ. ಈ ಹಾರದ ಕಥೆ ವಾಲ್ಮೀಕಿ ರಾಮಾಯಣದಲ್ಲಿ ಇಲ್ಲ, ವಾಲಿಯ ಕೊರಳಲ್ಲಿ ರತ್ನ ಮಾಲೆಯಿತ್ತೆಂದು ಮಾತ್ರ ಅದರಲ್ಲಿ ಹೇಳಿದೆ.

ಯುದ್ಧಪ್ರಸಂಗದಲ್ಲಾದರೋ ಶ್ರೀರಾಮನು ಎಂತಹ ಧರ್ಮನಿಷ್ಠೆಯಿಂದ ವರ್ತಿಸುತ್ತಿದ್ದನೆಂಬುದಕ್ಕೆ ಈ ನಿದರ್ಶನಗಳನ್ನು ನೋಡಿರಿ.

ಒಮ್ಮೆ ಯುದ್ಧದಲ್ಲಿ ಶ್ರೀರಾಮನು ರಾವಣನ ಧನುಸ್ಸು, ಖಡ್ಗಗಳನ್ನು ಕತ್ತರಿಸಿ, ರಾವಣನ ರಥಾಶ್ವಗಳನ್ನು ಕೊಂದು ಸಾರಥಿಯನ್ನು ವಧಿಸಿ, ರಾವಣನ ಕಿರೀಟವನ್ನೇ ಛೇದಿಸಿ ಬಿಡುತ್ತಾನೆ. ರಾವಣನು ಬಳಲಿ ದಿಗ್ಭ್ರಾಂತನಾಗುತ್ತಾನೆ. ಆಗ ಶ್ರೀರಾಮನು "ರಾವಣಾ, ತುಂಬ ಬಳಲಿದ್ದೀಯೆ. ಯುದ್ಧ ಸಾಧನಗಳನ್ನು ಕಳೆದುಕೊಂಡಿದ್ದೀಯೆ. ಈಗ ನಿನ್ನನ್ನು ಕೊಲ್ಲುವುದು ಯೋಗ್ಯವಲ್ಲ. ಲಂಕೆಗೆ ಹೋಗಿ ವಿಶ್ರಮಿಸಿಕೊಂಡು ಹೊಸ ರಥವನ್ನೇರಿ ಯುದ್ಧ ಸಂನದ್ಧನಾಗಿ ಬಾ. ಆಗ ನನ್ನ

ಪರಾಕ್ರಮವೇನೆಂಬುದನ್ನು ನೋಡಬಹುದು" ಎಂದು ಬಿಡುತ್ತಾನೆ. ರಾವಣನು ಲಜ್ಜೆಯಿಂದ ಲಂಕೆಗೆ ಹಿಂದಿರುಗುತ್ತಾನೆ. ಆ ಸಮಯದಲ್ಲಿ ರಾವಣನನ್ನು ಮರ್ದಿಸುವುದಕ್ಕೆ ಶ್ರೀರಾಮನು ಏಕೆ ಯತ್ನಿಸಲಿಲ್ಲ ? (ಯುದ್ಧ. ಸರ್ಗ ೫೯).

ಇನ್ನೊಂದು ಸಲ ಯುದ್ಧದಲ್ಲಿ ಶ್ರೀರಾಮನ ಅಸ್ತ್ರ ಬಲದಿಂದ ರಾವಣನು ಹತಪೌರುಷನಾಗಿ ರಥದಲ್ಲಿ ಬಳಲಿ ಮೂರ್ಛೆ ಹೋಗುತ್ತಾನೆ. ಅವನ ಸಾರಥಿಯು ರಾವಣನ ದುರವಸ್ಥೆಯನ್ನು ಕಂಡು ಯುದ್ಧರಂಗದಿಂದ ರಥವನ್ನು ಹಿಂದಿರುಗಿಸುತ್ತಾನೆ. ಆ ಸಮಯದಲ್ಲಿ ಶ್ರೀರಾಮನು ಬೆನ್ನಟ್ಟಿ ರಾವಣನನ್ನು ಸುಲಭವಾಗಿ ಕೊಲ್ಲಬಹುದಾಗಿತ್ತು. ಅದು ಅಧರ್ಮವೆಂದಲ್ಲವೆ ಶ್ರೀರಾಮನು ಸುಮ್ಮನಾದದ್ದು? (ಯುದ್ಧ. ಸರ್ಗ ೧೦೫)

ಇಂದ್ರಜಿತು ಅಂತರ್ಧಾನ ಹೊಂದಿ ಮಾಯಾಯುದ್ಧವನ್ನು ಮಾಡುತ್ತಿದ್ದಾನೆ. ಅವನ ಉಪದ್ರವವನ್ನು ತಡೆಯಲಾರದೆ ಕ್ರೋಧಾವಿಷ್ಟನಾದ ಲಕ್ಷ್ಮಣನು ಶ್ರೀರಾಮನೊಡನೆ "ಈಗ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿಬಿಡುತ್ತೇನೆ. ಸಮಸ್ತ ರಾಕ್ಷಸರೂ ಸತ್ತು ಹೋಗಲಿ!" ಎಂದು ಹೇಳಿ ಸಜ್ಜಾಗುತ್ತಾನೆ. ಆಗ ಶ್ರೀರಾಮನು ಲಕ್ಷ್ಮಣನಿಗೆ ಹೇಳುವ ಬುದ್ಧಿವಾದ ಇದು -

ನೈಕಸ್ಯ ಹೇತೋ ರಕ್ಷಾಂಸಿ ಪೃಥಿವ್ಯಾಂ ಹಂತುಮರ್ಹಸಿ ।
ಅಯುಧ್ಯಮಾನಂ ಪ್ರಚ್ಛನ್ನಂ ಪ್ರಾಂಜಲಿಂ ಶರಣಾಗತಮ್ ॥
ಪಲಾಯಂತಂ ಪ್ರಮತ್ತಂ ವಾ ನ ತ್ವಂ ಹಂತುಮಿಹಾರ್ಹಸಿ ॥

— *ಯುದ್ಧ. ಸರ್ಗ ೮೦*

"ಲಕ್ಷ್ಮಣ, ಒಬ್ಬನಿಗೋಸ್ಕರ ಪೃಥ್ವಿಯಲ್ಲಿರುವ ರಾಕ್ಷಸರೆಲ್ಲರನ್ನೂ ನೀನು ಕೊಲ್ಲುವುದು ತರವಲ್ಲ. ಯಾರು ನಮ್ಮೊಡನೆ ಯುದ್ಧ ಮಾಡುತ್ತಿಲ್ಲವೋ, ಅವರನ್ನು ಕೊಲ್ಲಬಾರದು. ಅಡಗಿಕೊಂಡವನನ್ನು ಕೈಮುಗಿದು ಶರಣಾಗತನಾದವನನ್ನು ಓಡಿಹೋಗುತ್ತಿರುವವನನ್ನು ಮದ್ಯಪಾನದಿಂದ ಮತ್ತನಾದವನನ್ನು ನೀನೆಂದಿಗೂ ಸಂಹರಿಸಬಾರದು"

ಮರಣಾಂತಿಕವಾದ ಘೋರ ಯುದ್ಧ ಪ್ರಸಂಗದಲ್ಲಿ ಸಹ ಈ ರೀತಿಯಾಗಿ ಧರ್ಮನಿಷ್ಠೆಯನ್ನು ಮೆರೆದವನು ವಾಲಿಯನ್ನು ಅಧರ್ಮದಿಂದ ವಧಿಸಿದನೆಂದು ಹೇಳಬಹುದೇ ?

ವಾಲಿಯ ಮೇಲೆ ಬಾಣವನ್ನು ಪ್ರಯೋಗಿಸಿದಾಗ ಶ್ರೀರಾಮನ ಬಳಿಯಲ್ಲಿ ಲಕ್ಷ್ಮಣನಿದ್ದನು. ಅಣ್ಣನ ಉದ್ದೇಶ ಅವನಿಗೆ ತಿಳಿದಿತ್ತು. ಮರೆಯಲ್ಲಿ ನಿಂತು ಹೊಡೆಯುವುದು ಶ್ರೀರಾಮನ ವ್ರತನಿಷ್ಠೆಗೆ ಹಾನಿಕಾರಕವೆಂದು ಅವನೇಕೆ ಭಾವಿಸಲಿಲ್ಲ? ಅಂತಹ ಭಾವನೆ

ಯುಂಟಾಗಿದ್ದರೆ ಅವನು ಅಣ್ಣನನ್ನು ತಡೆಯದೆ ಇರುತ್ತಿರಲಿಲ್ಲ. ಹಿಂದೆ ರಾವಣನು ಸೀತೆಯನ್ನು ಅಪಹರಿಸಿದಾಗ, ಶೋಕರೋಷಗಳಿಂದ ಆವಿಷ್ಟನಾದ ಶ್ರೀರಾಮನು "ದೇವತೆಗಳು ನನ್ನ ಸೀತೆ ಎಲ್ಲಿದ್ದಾಳೆಂಬುದನ್ನು ತಿಳಿಸಲಿ. ಇಲ್ಲದಿದ್ದರೆ ದೇವಲೋಕವನ್ನೇ ಸುಡುವೆನು. 'ನಾಶಯಾಮಿ ಜಗತ್ಸರ್ವಂ" ಎಂದು ಆರ್ಭಟಿಸಿದ್ದುಂಟು. ಆಗ ಲಕ್ಷ್ಮಣನು "ಅಣ್ಣ, ಅಪರಾಧಿಯಾದ ಒಬ್ಬನಿಗಾಗಿ ಅನ್ಯರನ್ನು ನಾಶಮಾಡುವುದು ಧರ್ಮವಲ್ಲ, ಶಾಂತನಾಗು" ಎಂದು ಬುದ್ಧಿವಾದವನ್ನು ಹೇಳಿದ್ದಾನೆ. ದುಡುಕಿ ಹೇಳಿದ ತನ್ನ ಮಾತಿಗೆ ಪಶ್ಚಾತ್ತಾಪಪಟ್ಟು ಶ್ರೀರಾಮನು ಶಾಂತನಾದ ನೆಂದು ಸ್ಪಷ್ಟವಾಗಿದೆ. 'ಸಾರಗ್ರಾಹೀ ಮಹಾಸಾರಂ ಪ್ರತಿಜಗ್ರಾಹ ರಾಘವಃ' ಎಂದು ಕವಿಯ ಉಪಸಂಹಾರವಿದೆ. ಕಟ್ಟುನಿಟ್ಟು ಸ್ವಭಾವದ ಲಕ್ಷ್ಮಣನು ಈ ಸಂದರ್ಭದಲ್ಲಿ ಅಣ್ಣನಿಗೆ ಬುದ್ಧಿವಾದವನ್ನು ಹೇಳದೆ ಇರುತ್ತಿರಲಿಲ್ಲ. ಆದ್ದರಿಂದ ಒಂದಾನೊಂದು ಧರ್ಮಸೂಕ್ಷ್ಮ ವನ್ನು ತಿಳಿಸುವುದಕ್ಕಾಗಿಯೇ ವಾಲಿ ಸಂಹಾರದ ಕಥೆಯನ್ನು ವಾಲ್ಮೀಕಿ ಮುನಿಗಳು ವಿಸ್ತರಿಸಿದ್ದಾರೆನ್ನುವುದರಲ್ಲಿ ಸಂದೇಹವಿಲ್ಲ.

ಉತ್ಥಾಪ್ಯವಾದ ಒಂದು ಸಂಭಾವನಾ ಪ್ರಶ್ನೆಯನ್ನೆತ್ತಬಹುದು. ಯುದ್ಧದಲ್ಲಿ ವಾಲಿಯನ್ನು ಸಂಹರಿಸುವ ಸಾಮರ್ಥ್ಯ ಶ್ರೀರಾಮನಿಗಿತ್ತು. ಅವನ ಪರಾಕ್ರಮ ಎಣೆಯಿಲ್ಲದ್ದು. ಅದನ್ನು

ಸುಗ್ರೀವನೇ ಒಪ್ಪಿಕೊಂಡಿದ್ದಾನೆ. ಹೀಗಿರುವಾಗ ವಾಲಿಯನ್ನು ಯುದ್ಧಕ್ಕೆ ಏಕೆ ಆಹ್ವಾನಿಸಲಿಲ್ಲ ? ಇದಕ್ಕೆ ಕಾರಣವೇನು ? ಈ ಸಂಭಾವನಾ ಪ್ರಶ್ನೆಗೆ ನಾವು ಊಹೆಯ ಕಾರಣವನ್ನೇ ಕೊಡಬೇಕಾಗುತ್ತದೆ.

ಯುದ್ಧಕ್ಕೆ ಆಹ್ವಾನಿಸಿದಲ್ಲಿ ವಾಲಿಯೊಡನೆ ವಿವಾದವು ಹುಟ್ಟಿದರೆ ಆತನು ರುಮೆಯಲ್ಲೆಸಗಿದ ಅಪರಾಧವನ್ನು ಹೇಳಬೇಕಾಗಿ ಬರಬಹುದು. ಆಗ ವಾಲಿಯು ತನ್ನ ತಪ್ಪನ್ನೊಪ್ಪಿಕೊಂಡು ಶ್ರೀರಾಮನಿಗೆ ಶರಣಾಗತನಾದರೆ ಏನು ಮಾಡಬೇಕು? ಶರಣಾಗತನನ್ನು ರಕ್ಷಿಸುತ್ತೇನೆಂಬುದು ಆತನ ದೃಢವ್ರತ. ವಿಭೀಷಣನ ಶರಣಾಗತಿ ಪ್ರಸಂಗದಲ್ಲಿ-

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ॥

ಎಂದು ಹೇಳಿರುತ್ತಾನೆ. 'ಯದಿ ವಾ ರಾವಣಃ ಸ್ವಯಂ' ರಾವಣನೇ ಶರಣಾಗತನಾದರೂ ಅವನಿಗೆ ಅಭಯ ಹಸ್ತವನ್ನೀಯುತ್ತೇನೆ - ಎನ್ನುತ್ತಾನೆ. ಆ ಸಂದರ್ಭದಲ್ಲಿ 'ವಾಲಿಯನ್ನು ಕೊಲ್ಲುತ್ತೇನೆ' ಎಂದು ಸುಗ್ರೀವನಿಗೆ ಅಗ್ನಿಸಾಕ್ಷಿಕವಾಗಿ ಕೊಟ್ಟ

ಪ್ರತಿಜ್ಞೆಯು ಭಗ್ನವಾದೀತು - ಎಂಬುದು ಅವನ ಆಲೋಚನೆಯಾಗಿದ್ದಿರಬಹುದು. ಎರಡನೆಯದಾಗಿ ವಾಲಿಯು ಕಪೀಶ್ವರನಾದ್ದರಿಂದ ವಾನರಸೇನೆಯೇ ಅವನ ಪಕ್ಷವನ್ನು ವಹಿಸಿ ಯುದ್ಧಕ್ಕೆ ಬರಬಹುದು. ಕಪಿಸೇನೆಯನ್ನು ಸಂಹರಿಸಬೇಕಾದೀತು. ಹಾಗಾದರೆ ಸೀತಾನ್ವೇಷಣೆಗೆ ವಾನರರ ನೆರವು ತಪ್ಪೀತು ಎಂದು ಆತನ ಚಿಂತನೆ ಇರಬಹುದು. ಅಲ್ಲದೆ ಮುಂದೆ ತಾನು ಸಾಧಿಸಬೇಕಾದ ಕಾರ್ಯವು ಪರ್ವತಾಕಾರವಾಗಿ ಉಳಿದಿದೆ. ಹೇಗಿದ್ದರೂ ವಾಲಿಯು ವಧ್ಯನಾದವನು. ಯುದ್ಧವನ್ನು ಹೂಡಿದರೆ ಎಷ್ಟು ದಿನ ನಡೆಯುವುದೋ ಅದಕ್ಕಾಗಿ ಕಾಲಹರಣಬೇಡ - ಎಂದು ಸಹ ಭಾವಿಸಿರಬಹುದು.

ಸುಗ್ರೀವನ ಸ್ನೇಹಲಾಭಕ್ಕಾಗಿ ವಾಲಿಯನ್ನು ಕೊಲ್ಲಲಿಲ್ಲ ಎಂಬುದನ್ನು ನಾವು ಸ್ಪಷ್ಟವಾಗಿ ನೆನಪಿನಲ್ಲಿಡಬೇಕು. ವಾಲಿಯಲ್ಲಿ ಅಪರಾಧವಿಲ್ಲದಿದ್ದರೆ ಅಂತಹ ಕಾರ್ಯಕ್ಕೆ ಶ್ರೀರಾಮನು ಕೈ ಹಾಕುತ್ತಲೇ ಇರಲಿಲ್ಲ. ವಾಲಿಯ ಬಳಿಗೇ ಹೋಗಿ ಸೀತಾನ್ವೇಷಣೆಗೆ ಸಹಾಯವನ್ನು ಕೇಳಬಹುದಾಗಿತ್ತು. ಸುಗ್ರೀವನ ವೃತ್ತಾಂತವನ್ನು ಕೇಳಿದ ಮೇಲೆ ವಾಲಿಯು ಅಪರಾಧಿಯೆಂದು ಸ್ಫುಟವಾಯಿತು. ಅಂತಹ ಅಪರಾಧಕ್ಕೆ ವಧೆಯೇ ಪ್ರಾಯಶ್ಚಿತ್ತವೆಂದು ಆಗಲೇ ನಿರ್ಣಯಿಸಿಕೊಂಡಿದ್ದಾನೆ.

'ವಾಲೀ ಚಾರಿತ್ರ ದೂಷಕಃ' ಎಂದು ನಿರ್ಣಯಿಸಿ, ಅವನು ವಧ್ಯನೆಂದು ತಿಳಿಸಿದ್ದಾನೆ.

ಯಾವ ಪ್ರಕಾರವಾಗಿ ಪರೀಕ್ಷಿಸಿದರೂ ಶ್ರೀರಾಮನಲ್ಲಿ ಅಣುಮಾತ್ರ ದೋಷವನ್ನೂ ಹೇಳಲು ಸಾಧ್ಯವಿಲ್ಲ. 'ತಸ್ಯ ದಂಡೋ ವಧಃ ಸ್ಮೃತಃ' ಎಂಬುದನ್ನು ಆತನು ಮತ್ತೆ ಮತ್ತೆ ಹೇಳಿದ್ದರೂ ಜನರು ಆ ಮಾತನ್ನೇ ಗಮನಿಸದೆ ದೋಷಾರೋಪವನ್ನು ಮಾಡುತ್ತಿದ್ದಾರೆ. ಕವಿಯ ಪ್ರತಿಪಾದನೆ ಯಾವ ರೀತಿ ಇದೆ. ಉದ್ದಿಷ್ಟ ವ್ಯಕ್ತಿಯ ಪೂರ್ವಾಪರ ಚಾರಿತ್ರವು ಎಂತಹುದು. ವಿಪತ್ಕಾಲ ದಲ್ಲಿಯೂ ಆತನು ನಡೆದುಕೊಂಡ ಬಗೆ ಯಾವುದು? ಮುಂತಾದ್ದನ್ನು ವಿಚಾರಿಸದೆ, ಸಹಸಾ 'ಇದು ತಪ್ಪು' ಎಂದು ತೀರ್ಮಾನಿಸುವುದು ದೊಡ್ಡ ಅಪಚಾರವೇ ಸರಿ. ವಾಲಿವಧ ಪ್ರಸಂಗದಲ್ಲಿ ಶ್ರೀರಾಮನ ಧರ್ಮನಿಷ್ಠೆ ನಿಷ್ಕಳಂಕವಾಗಿ ಉಳಿಯುತ್ತದೆ.